# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ : ದಾವಣಗೆರೆ ವಿಭಾಗ : ದಾವಣಗೆರೆ

ಸಂ.ಕರಾಸಾ/ದಾವಿ/ಸಂಚಾರ/ವಾಣಿಜ್ಯ/381/2022-23 ದಿನಾಂಕ :11/05/2022

## "ಸಂಧಾನ ಪ್ರಕಟಣೆ ಸಂಖ್ಯೆ : 02/2022-23" (ಜಾಹೀರಾತು ಪ್ಯಾಕೇಜ್‌ವಾರು )

ಕ.ರಾ.ರ.ಸಾ.ನಿಗಮ, ದಾವಣಗೆರೆ ವಿಭಾಗದ ವ್ಯಾಪ್ತಿಗೆ ಬರುವ ಈ ಕೆಳಕಂಡ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ ಜಾಹೀರಾತು ಅಳವಡಿಸಲು ಪ್ಯಾಕೇಜ್‌ವಾರು ಮಾದರಿಯಲ್ಲಿ ಐದು (05) ವರ್ಷದ ಅವಧಿಗೆ ಪರವಾನಗಿದಾರರನ್ನು ಆಯ್ಕೆ ಮಾಡಲು **ದಿನಾಂಕ:- 02.06.2022 ರಂದು ಮಧ್ಯಾನ 15,00 ಗಂಟೆಗೆ** ಮಾತುಕತೆಯ ಮೂಲಕ ಸಂಧಾನ ನೀಡಲು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದೆ. ಪರವಾನಗಿ ಶುಲ್ಕದ ಮೇಲೆ ಶೇಖಡ 10 % ರಷ್ಟು ಪ್ರತಿ ವರ್ಷ ಹೆಚ್ಚಿಸಲಾಗುವುದು. ಅವಧಿ ಮುಗಿದ ಬಳಿಕ ಹೊಸದಾಗಿ ಇ-ಟೆಂಡರ್ ಕರೆಯಲಾಗುವುದು. ಸಂಧಾನದ ದಸ್ತಾವೇಜುಗಳನ್ನು ನಿಗಮದ ವೆಬ್‌ಸೈಟ್ **ksrtc.karnataka.gov.in** ದಿನಾಂಕ:-11.05.2022 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

## ಬಸ್ ನಿಲ್ದಾಣವಾರು ಹೊರ ಆವರಣದ ಜಾಹೀರಾತು ಪ್ಯಾಕೇಜ್‌ಗಳು

### 1) ಜಗಳೂರು ಬಸ್ ನಿಲ್ದಾಣದ ಹೊರ ಆವರಣದ ಪ್ಯಾಕೇಜ್ ಸಂಖ್ಯೆ-04

(ಒಟ್ಟು ವಿಸ್ತೀರ್ಣ 900 ಚದರ ಅಡಿಗೆ ವಿವಿಧ ಮಾದರಿಯ ಜಾಹೀರಾತುಗಳಿಗೆ ಬಸ್ ನಿಲ್ದಾಣ ಹೊರಭಾಗದ ನಕ್ಷೆಯಲ್ಲಿ ತೋರಿಸಿದಂತೆ)

| ಕ್ರ.ಸಂ | ಜಾಹೀರಾತು ಹೆಸರು ಮತ್ತು ಸ್ಥಳದ ವಿವರ | ಜಾಹೀರಾತುಗಳ ಸಂಖ್ಯೆ / ಪ್ರದರ್ಶನ ವಿಧ (ಒಂದು ಕಡೆ/ ಎರಡು ಕಡೆಗೆ) | ವಿಸ್ತೀರ್ಣದ ವಿವರ (ಉದ್ದ & ಅಗಲ) (ಚ.ಅ) | ಒಟ್ಟು ವಿಸ್ತೀರ್ಣ (ಚ.ಅ. ಗಳಲ್ಲಿ) | ದರ ಪ್ರತೀ ಚದರ ಅಡಿಗೆ | ಕನಿಷ್ಠ ಮಾಸಿಕ ಪರವಾನಗಿ ಶುಲ್ಕ (ರೂ.ಗಳಲ್ಲಿ) | ಒಟ್ಟು ಕನಿಷ್ಠ ಮಾಸಿಕ ಪರವಾನಗಿ ಶುಲ್ಕ (ರೂ.ಗಳಲ್ಲಿ) | ಡಿ.ಡಿ.ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) | ಡಿ.ಡಿ ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಅರ್ಜಿ ಶುಲ್ಕ + ಜಿ.ಎಸ್.ಟಿ (ರೂ.ಗಳಲ್ಲಿ) |
|---|---|---|---|---|---|---|---|---|---|
| 1 | ಹೋರ್ಡಿಂಗ್ಸ್ | 1 /ಒಂದು ಕಡೆಗೆ | 25*12 | 300 | 2.32 | 696.66 | 2090 | 6,270 | 118 |
| 2 | ಹೋರ್ಡಿಂಗ್ಸ್ | 3 /ಒಂದು ಕಡೆಗೆ | 20*10 | 600 | 2.32 | 1393.2 | | | |

### 2) ಹರಿಹರ ಬಸ್ ನಿಲ್ದಾಣದ ಹೊರ ಆವರಣದ ಪ್ಯಾಕೇಜ್ ಜಾಹೀರಾತು ಸಂಖ್ಯೆ-02

(ಒಟ್ಟು ವಿಸ್ತೀರ್ಣ 4200 ಚದರ ಅಡಿಗೆ ವಿವಿಧ ಮಾದರಿಯ ಜಾಹೀರಾತುಗಳಿಗೆ ಬಸ್ ನಿಲ್ದಾಣ ಹೊರಭಾಗದ ನಕ್ಷೆಯಲ್ಲಿ ತೋರಿಸಿದಂತೆ)

| ಕ್ರ.ಸಂ | ಜಾಹೀರಾತು ಹೆಸರು ಮತ್ತು ಸ್ಥಳದ ವಿವರ | ಜಾಹೀರಾತುಗಳ ಸಂಖ್ಯೆ / ಪ್ರದರ್ಶನ ವಿಧ (ಒಂದು ಕಡೆ/ ಎರಡು ಕಡೆಗೆ) | ವಿಸ್ತೀರ್ಣದ ವಿವರ (ಉದ್ದ & ಅಗಲ) (ಚ.ಅ) | ಒಟ್ಟು ವಿಸ್ತೀರ್ಣ (ಚ.ಅ. ಗಳಲ್ಲಿ) | ದರ ಪ್ರತೀ ಚದರ ಅಡಿಗೆ | ಕನಿಷ್ಠ ಮಾಸಿಕ ಪರವಾನಗಿ ಶುಲ್ಕ (ರೂ.ಗಳಲ್ಲಿ) | ಒಟ್ಟು ಕನಿಷ್ಠ ಮಾಸಿಕ ಪರವಾನಗಿ ಶುಲ್ಕ (ರೂ.ಗಳಲ್ಲಿ) | ಡಿ.ಡಿ.ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) | ಡಿ.ಡಿ ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಅರ್ಜಿ ಶುಲ್ಕ + ಜಿ.ಎಸ್.ಟಿ (ರೂ.ಗಳಲ್ಲಿ) |
|---|---|---|---|---|---|---|---|---|---|
| 1 | ಯುನಿಪೋಲ್ಸ್ | 2/ಎರಡು ಕಡೆ | 30*10 | 1200 | 6.16 | 7392 | 25850 | 77,550 | 305 |
| 2 | ಹೋರ್ಡಿಂಗ್ಸ್ | 1/ಒಂದು ಕಡೆ | 40*20 | 800 | 6.15 | 4920 | | | |
| 3 | ಹೋರ್ಡಿಂಗ್ಸ್ | 1/ಒಂದು ಕಡೆ | 30*20 | 600 | 6.15 | 3692 | | | |
| 4 | ಹೋರ್ಡಿಂಗ್ಸ್ | 8/ಒಂದು ಕಡೆ | 20*10 | 1600 | 6.15 | 9846 | | | |

ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ದಾವಣಗೆರೆ ವಿಭಾಗ, ದಾವಣಗೆರೆ-577 002 ಇವರಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಂಪರ್ಕಿಸುವ ದೂರವಾಣಿ ಸಂಖ್ಯೆ : -ವಿಭಾಗೀಯ ಸಂಚಾರ ಅಧಿಕಾರಿ – 7760990452, ಸಹಾಯಕ ಸಂಚಾರ ವ್ಯವಸ್ಥಾಪಕರು –7760990461

ವಿಭಾಗೀಯ ನಿಯಂತ್ರಣಾಧಿಕಾರಿ

ಕ.ರಾ.ರ.ಸಾ.ನಿಗಮ::ದಾವಣಗೆರೆ ವಿಭಾಗ

<u>ಪ್ರತಿಯನ್ನು ವಂದನೆಗಳೊಂದಿಗೆ :–</u>

1. ಮುಖ್ಯ ಸಂಚಾರ ವ್ಯವಸ್ಥಾಪಕರು (ವಾಣಿಜ್ಯ), ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
2. ವ್ಯವಸ್ಥಾಪಕ ನಿರ್ದೇಶಕರು, ವಾ.ಕ.ರ.ಸಾ.ಸಂಸ್ಥೆ, ಈ.ಕ.ರ.ಸಾ.ಸಂಸ್ಥೆ ಮತ್ತು ಬೆ.ಮ.ಸಾ.ಸಂಸ್ಥೆ ಕೇಂದ್ರ ಕಛೇರಿ, ಹುಬ್ಬಳ್ಳಿ, ಕಲಬುರಗಿ ಮತ್ತು ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
3. ಎಲ್ಲಾ ಹಿರಿಯ/ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕ.ರಾ.ರ.ಸಾ.ನಿಗಮ, ವಾ.ಕ.ರ.ಸಾ.ಸಂಸ್ಥೆ, ಈ.ಕ.ರ.ಸಾ.ಸಂಸ್ಥೆ ಮತ್ತು ಬೆ.ಮ.ಸಾ.ಸಂಸ್ಥೆ ರವರ ಮಾಹಿತಿಗಾಗಿ ಹೆಚ್ಚಿನ ಪ್ರತಿಗಳನ್ನು ಸಾರ್ವಜನಿಕರ ಅವಗಹಾನೆಗಾಗಿ ಮುಖ್ಯ ಬಸ್ ನಿಲ್ದಾಣದ ಸೂಚನಾ ಫಲಕದಲ್ಲಿ ಅಂಟಿಸಲು ಕೋರಿದೆ.
4. ಸಹಾಯಕ ಸಂಚಾರ ವ್ಯವಸ್ಥಾಪಕರು, ವಿಭಾಗೀಯ ಸಂಚಾರ ಅಧಿಕಾರಿ, ಸಹಾಯಕ ಲೆಕ್ಕಾಧಿಕಾರಿ, ಕಾನೂನು ಅಧಿಕಾರಿ, ಸಹಾಯಕ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಭದ್ರತಾ & ಜಾಗೃತಾಧಿಕಾರಿ, ಕ.ರಾ.ರ.ಸಾ.ನಿಗಮ ದಾವಣಗೆರೆ ವಿಭಾಗ ರವರ ಮಾಹಿತಿಗಾಗಿ ದಿನಾಂಕ 02.06.2022 ರಂದು ಕಛೇರಿಯಲ್ಲಿರಲು ಸೂಚಿಸಿದೆ.
5. ಸಹಾಯಕ ಆಡಳಿತಾಧಿಕಾರಿ, ಕ.ರಾ.ರ.ಸಾ.ನಿಗಮ, ದಾವಣಗೆರೆ ವಿಭಾಗ ರವರಿಗೆ ಕಳುಹಿಸುತ್ತಾ ಸದರಿ ಪ್ರಕಟಣೆಯನ್ನು ವಿಭಾಗೀಯ ಕಛೇರಿ ಸೂಚನಾ ಫಲಕದಲ್ಲಿ ಪ್ರಕಟಿಸಲು ಈ ಮೂಲಕ ತಿಳಿಸಿದೆ.
6. ಘಟಕ ವ್ಯವಸ್ಥಾಪಕರು, ಕ.ರಾ.ರ.ಸಾ.ನಿಗಮ, ದಾವಣಗೆರೆ–01/ ದಾವಣಗೆರೆ–02 ಹರಿಹರ ಘಟಕ ರವರ ಮಾಹಿತಿಗಾಗಿ ಕಳುಹಿಸುತ್ತಾ ತಮ್ಮ ವ್ಯಾಪ್ತಿಗೆ ಬರುವ ಎಲ್ಲಾ ಬಸ್ ನಿಲ್ದಾಣಗಳಲ್ಲಿ ಸದರಿ ಪ್ರಕಟಣೆಯನ್ನು ನಿಲ್ದಾಣದ ಸೂಚನಾ ಫಲಕದಲ್ಲಿ ಪ್ರಕಟಿಸಿ ಸಾರ್ವಜನಿಕ ಗಮನಕ್ಕೆ ತರುವುದು ಹಾಗೂ ಹೆಚ್ಚಿನ ಪ್ರಚಾರ ಮಾಡುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳುವುದು.

**ವಿಭಾಗದ ವ್ಯಾಪ್ತಿಯ ಬಸ್ಸು ನಿಲ್ದಾಣಗಳಲ್ಲಿ ಒಳಾಂಗಣ ಹಾಗೂ ಹೊರಾಂಗಣ ಜಾಹೀರಾತು ಅಳವಡಿಸಲು ಪ್ಯಾಕೇಜ್ ಪದ್ಧತಿಯಲ್ಲಿ ಐದು (05) ವರ್ಷದ ಅವಧಿಗೆ ಪರವಾನಗಿಗಾಗಿ ಸಂಧಾನದಲ್ಲಿ ಭಾಗವಹಿಸಲು ಷರತ್ತು ಮತ್ತು ನಿಬಂಧನೆಗಳು (ಸಾ.ಸ್ಥಾ.ಆ.ಸಂ.788/2017 / 794 ರಂತೆ)**

I. ಸಂಧಾನದಲ್ಲಿ ಭಾಗವಹಿಸುವ ಬಿಡ್‌ದಾರರು ಅರ್ಜಿ ಸಲ್ಲಿಸುವ ಮೊದಲು ತಮ್ಮ ಸ್ವಂತ ಖರ್ಚಿನಲ್ಲಿ ಆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ನಂತರವೇ ಬಿಡ್ ಮೊತ್ತ ದಾಖಲಿಸುವುದು ಬಿಡ್‌ದಾರರ ಜವಾಬ್ದಾರಿಯಾಗಿರುತ್ತದೆ. ಸಂಧಾನ ಪ್ರಕ್ರಿಯೆ ಮುಗಿದ ನಂತರ ಯಾವುದೇ ಕಾರಣಕ್ಕೂ ಮಳಿಗೆಯ ವ್ಯವಹಾರ/ಸ್ಥಳವನ್ನು ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.

II. ವಾಣಿಜ್ಯ ಮಳಿಗೆಗಳು ಯಾವ ಯಾವ ಸ್ಥಿತಿಯಲ್ಲಿವೆಯೋ ಹಾಗೆಯೇ ನೀಡಲಾಗುವುದು ಮತ್ತು ಸಂಧಾನದಲ್ಲಿ ನೀಡಿರುವ / ನಮೂದಿಸಿರುವ ಸ್ಥಳದಲ್ಲಿ ಮಾತ್ರ ವ್ಯವಸಹಾರ ನಡೆಸತಕ್ಕದ್ದು ಹಾಗೂ ಮಳಿಗೆಯ ಮೂಲ ಸ್ವರೂಪಕ್ಕೆ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.

**1. ಸಂಧಾನದ ಅರ್ಜಿ ಶುಲ್ಕ ಹಾಗೂ ಇ.ಎಂ.ಡಿ. ಮೊತ್ತ:**

I. ಸಂಧಾನದಲ್ಲಿ ಭಾಗವಹಿಸುವ ಬಿಡ್‌ದಾರರು / ಅರ್ಜಿದಾರರು ನಿಗದಿತ ಇ.ಎಂ.ಡಿ. ಮೊತ್ತವನ್ನು Divisional Controller, K.S.R.T.C, Davanagere Division ರವರ ಪದನಾಮಕ್ಕೆ ಡಿ.ಡಿ. ರೂಪದಲ್ಲಿ ಪಡೆದು ಸಂಧಾನದ ಕೊನೆಯ ದಿನಾಂಕದಂದು ವಿಭಾಗೀಯ ಕಛೇರಿ ದಾವಣಗೆರೆ ಇಲ್ಲಿ ಹಾಜರಿರತಕ್ಕದ್ದು.

II. ಅರ್ಜಿದಾರರು/ಬಿಡ್‌ದಾರರುಪ್ರಕಟಣೆಯಲ್ಲಿ ಮಳಿಗೆಗೆ ನಿಗದಿಪಡಿಸಿದ ಅರ್ಜಿ ಶುಲ್ಕವನ್ನು Divisional Controller, K.S.R.T.C, Davanagere Division ರವರ ಪದನಾಮಕ್ಕೆ ಪ್ರತ್ಯೇಕವಾಗಿ ಡಿ.ಡಿ. ರೂಪದಲ್ಲಿ ಪಡೆದು ಸಂಧಾನದ ಕೊನೆಯ ದಿನಾಂಕದಂದು ವಿಭಾಗೀಯ ಕಛೇರಿ ದಾವಣಗೆರೆ ಇಲ್ಲಿ ಹಾಜರಿರತಕ್ಕದ್ದು.

III. ನಿಗದಿಪಡಿಸಿದ ಮಾಸಿಕ ಮಿತವ್ಯಯ ಪರವಾನಗಿ ಶುಲ್ಕದ ಮೂರು (03) ಪಟ್ಟು ಮೊತ್ತವನ್ನು ಇ.ಎಂ.ಡಿ.(Earnest Money Deposit) ಯನ್ನಾಗಿ ನಿಗದಿಪಡಿಸಲಾಗಿರುತ್ತದೆ.

IV. ಸಂಧಾನ ಪ್ರಕಟಣೆಯಲ್ಲಿ ನಿಗದಿಪಡಿಸಿರುವ ಇ.ಎಂ.ಡಿ.ಮೊತ್ತಕ್ಕೆ, ಸಂಧಾನ ಪ್ರಕಟಣೆಯ ದಿನಾಂಕದ ಅವಧಿಯಲ್ಲಿ ಪಡೆದುಕೊಂಡಿರುವ ಡಿ.ಡಿ.ಯನ್ನು ಮಾತ್ರ ಪರಿಗಣಿಸಲಾಗುವುದು.

V. ಇ.ಎಂ.ಡಿ. ಮೊತ್ತಕ್ಕೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ.

**2.** ಸಂಧಾನದಲ್ಲಿ ಭಾಗವಹಿಸಿದ **ಮಳಿಗೆಗೆ ಸಂಬಂಧಿಸಿದ ವಿವರಗಳನ್ನು ಸಂಪೂರ್ಣವಾಗಿ ಓದಿ ಅರ್ಥೈಸಿಕೊಂಡಿರುವ ಬಗ್ಗೆ ಹಾಗೂ ಎಲ್ಲಾ ಷರತ್ತು ಮತ್ತು ನಿಬಂಧನೆಗಳನ್ನು ಒಪ್ಪಿರುವ ಬಗ್ಗೆ ನಿಗಧಿತ ನಮೂನೆ ಪ್ರತಿಯಲ್ಲಿ, ಟೆಂಡರ್‌ದಾರರು/ಅರ್ಜಿದಾರರು/ಬಿಡ್‌ದಾರರು ಸಹಿ ಮಾಡಿ, ನೀಡುವುದು.**

I. ಬಿಡ್‌ದಾರರು/ಅರ್ಜಿದಾರರು ಒಂದು ಜಾಹೀರಾತು ಪ್ಯಾಕೇಜ್‌ಗೆ ಒಂದಕ್ಕಿಂತ ಹೆಚ್ಚಿನ ಬಿಡ್‌ಗಳನ್ನು ಸಲ್ಲಿಸಲು ಅವಕಾಶವಿರುವುದಿಲ್ಲ.

II. ಬಿಡ್‌ದಾರರ/ಅರ್ಜಿದಾರರ ಷರತ್ತಿನ ಟೆಂಡರ್‌ಗಳನ್ನು ಪರಿಗಣಿಸಲು ಅವಕಾಶವಿರುವುದಿಲ್ಲ. ಯಾವುದೇ ಷರತ್ತುಗಳು ಇಲ್ಲದೆ ಟೆಂಡರ್ ನಿಯಮಗಳನ್ನು ಪಾಲಿಸಿರುವ ಅರ್ಹ ಟೆಂಡರ್‌ಗಳನ್ನು ಮಾತ್ರ ಅಂಗೀಕರಿಸಲಾಗುವುದು.

**3.** ಬಿಡ್‌ದಾರರು/ಅರ್ಜಿದಾರರು ಕೆಳಕಂಡ ಅಗತ್ಯ ದಾಖಲೆಗಳನ್ನು ಸಲ್ಲಿಸಬೇಕಾಗಿರುತ್ತದೆ.

| 1. ರೂ.5.00 ಲಕ್ಷಗಳಿಗಿಂತ ಕಡಿಮೆ ಮಾಸಿಕ ಪರವಾನಗಿ ಶುಲ್ಕವಿರುವ ವಾಣಿಜ್ಯ ಮಳಿಗೆಗಳಿಗೆ | 2. ರೂ.5.00 ಲಕ್ಷ ಅಥವಾ ಹೆಚ್ಚಿನ ಮಾಸಿಕ ಪರವಾನಗಿ ಶುಲ್ಕವಿರುವ ವಾಣಿಜ್ಯ ಮಳಿಗೆಗಳಿಗೆ |
|---|---|
| ಅ) ವಿಳಾಸ ದೃಢೀಕರಣ ಪತ್ರ (Voter ID, Aadhaar Card, Bank Passbook, Passport, etc.)<br>ಆ) ಬಿಡ್‌ದಾರರು ಪಾಲುದಾರಿಕೆ ವ್ಯವಹಾರ ಸಂಸ್ಥೆಯನ್ನು ಹೊಂದಿದ್ದಲ್ಲಿ, ಭಾರತೀಯ ಪಾಲುದಾರಿಕೆ ಕಾಯ್ದೆಯಡಿಯಲ್ಲಿ ನೋಂದಣಿಯಾಗಿರುವ ದಾಖಲಾತಿ, ಬಿಡ್ ಸಹಿಗೊಳಿಸುವ ವ್ಯಕ್ತಿಯು ಪಾಲುದಾರಿಕೆಯ ಸಂಸ್ಥೆಯಲ್ಲಿ ವ್ಯವಸ್ಥಾಪಕ ಪಾಲುದಾರನಾಗಿರುವ ಬಗ್ಗೆ ದಾಖಲಾತಿಯನ್ನು ಸಲ್ಲಿಸಬೇಕು. ಪಾಲುದಾರಿಕೆಯಲ್ಲಿರುವ ಎಲ್ಲಾ ನಿರ್ದೇಶಕರು / ಪಾಲುದಾರರ ಪೂರ್ಣ ವಿಳಾಸದ ಮಾಹಿತಿಯನ್ನು ಸಲ್ಲಿಸಬೇಕು.<br>ಇ) ಬಿಡ್‌ದಾರರು ಕಂಪನಿ / ವ್ಯವಹಾರ ಸಂಸ್ಥೆಯ ಹೆಸರಿನಲ್ಲಿ ಬಿಡ್ ಮಾಡಿದ್ದಲ್ಲಿ, ಕಂಪನಿಯು ಇಂಡಿಯನ್ ಕಂಪನೀಸ್ ಕಾಯ್ದೆಯಡಿಯಲ್ಲಿ ನೋಂದಣಿಯಾಗಿರುವ ದಾಖಲಾತಿಯನ್ನು ಸಲ್ಲಿಸಬೇಕು.<br>ಈ) ಪಾನ್ ಕಾರ್ಡ್ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.<br>ಉ) ಇ.ಎಂ.ಡಿ. ಮೊತ್ತದ ಹಾಗೂ ಅರ್ಜಿ ಶುಲ್ಕದ ಡಿ.ಡಿ.ಯ ಜೆರಾಕ್ಸ್ | ಅ) ಕಂಪನಿ / ವ್ಯಕ್ತಿಯ ವಿಳಾಸ ದೃಢೀಕರಣ ಪತ್ರ (Voter ID, Aadhaar Card, Bank Passbook, Passport, etc)<br>ಆ) ಆದಾಯ ತೆರಿಗೆ ತೀರುವಳಿ ಪತ್ರ.<br>ಇ) ಜಾಹೀರಾತು ಉದ್ಯಮದಲ್ಲಿ ಕನಿಷ್ಠ 2 ವರ್ಷಗಳ ಅನುಭವ ಪತ್ರ (ಕೆಲಸದ ಆದೇಶದ ಪ್ರತಿ)<br>ಈ)ಹಿಂದಿನ 2ವರ್ಷಗಳ ಅವಧಿಯಲ್ಲಿ ಮಾಸಿಕ ಮಿತವ್ಯಯ ಪರವಾನಗಿ ಶುಲ್ಕದ ಹತ್ತರಷ್ಟು ವಾರ್ಷಿಕ ವಹಿವಾಟಿನ ದಾಖಲೆಗಳನ್ನು ಲೆಕ್ಕಪರಿಶೋಧಕರಿಂದ ದೃಢೀಕರಿಸಿ ನೀಡುವುದು.<br>ಉ) ಬಿಡ್‌ದಾರರು ಪಾಲುದಾರಿಕೆ ವ್ಯವಹಾರ ಸಂಸ್ಥೆಯನ್ನು ಹೊಂದಿದ್ದಲ್ಲಿ, ಭಾರತೀಯ ಪಾಲುದಾರಿಕೆ ಕಾಯ್ದೆಯಡಿಯಲ್ಲಿ ನೋಂದಣಿಯಾಗಿರುವ ದಾಖಲಾತಿ, ಬಿಡ್ ಸಹಿಗೊಳಿಸುವ ವ್ಯಕ್ತಿಯು ಪಾಲುದಾರಿಕೆಯ ಸಂಸ್ಥೆಯಲ್ಲಿ ವ್ಯವಸ್ಥಾಪಕ ಪಾಲುದಾರನಾಗಿರುವ ಬಗ್ಗೆ ದಾಖಲಾತಿಯನ್ನು ಸಲ್ಲಿಸಬೇಕು. ಪಾಲುದಾರಿಕೆಯಲ್ಲಿರುವ ಎಲ್ಲಾ ನಿರ್ದೇಶಕರು / ಪಾಲುದಾರರ |

ಪ್ರತಿಯನ್ನು ಅಪಲೋಡ್ ಮಾಡುವುದು.

H)ಬಿಡ್‌ದಾರರು ನಿಗಮದ ಟೆಂಡರ್‌ನ ಎಲ್ಲಾ ಷರತ್ತು ಮತ್ತು ನಿಬಂಧನೆಗಳನ್ನು ಒಪ್ಪಿರುವ ಬಗ್ಗೆ ಅನುಬಂಧ–1ರ ಸ್ವಯಂ ದೃಢೀಕರಣ ಪತ್ರ ಭರ್ತಿ ಮಾಡಿ ಸಲ್ಲಿಸುವುದು.

ಋ) ಬಿಡ್‌ದಾರರು ಕ.ರಾ.ರ.ಸಾ.ನಿಗಮ ಮತ್ತು ಇತರೆ ನಿಗಮಗಳಲ್ಲಿ ಆಜಜಿಚಿಣಟಣಜಡಿ ಆಗದೆ ಇರುವ ಬಗ್ಗೆ ಹಾಗೂ ಕಪ್ಪುಪಟ್ಟಿ (Black List)ಗೆ ಸೇರಿಲ್ಲದಿರುವ ಬಗ್ಗೆ ಅನುಬಂಧ–2ರ ಸ್ವಯಂ–ದೃಡೀಕರಣ ಪತ್ರ ಭರ್ತಿ ಮಾಡಿ ಸಲ್ಲಿಸುವುದು.

ಪೂರ್ಣ ವಿಳಾಸದ ಮಾಹಿತಿಯನ್ನು ಸಲ್ಲಿಸಬೇಕು.

ಊ) ಬಿಡ್‌ದಾರರು ಕಂಪನಿ / ವ್ಯವಹಾರ ಸಂಸ್ಥೆಯ ಹೆಸರಿನಲ್ಲಿ ಬಿಡ್ ಮಾಡಿದ್ದಲ್ಲಿ, ಕಂಪನಿಯು ಇಂಡಿಯನ್ ಕಂಪನೀಸ್ ಕಾಯ್ದೆಯಡಿಯಲ್ಲಿ ನೋಂದಣಿಯಾಗಿರುವ ದಾಖಲಾತಿಯನ್ನು ಸಲ್ಲಿಸಬೇಕು.

ಊ) ವಹಿವಾಟಿಗೆ ಪೂರಕವಾಗಿ ಕಳೆದ 02 ವರ್ಷದ ಲಾಭ / ನಷ್ಟದ ಲೆಕ್ಕಾಚಾರದ ದಾಖಲೆಗಳು ಮತ್ತು ಬ್ಯಾಲೆನ್ಸ್ ಶೀಟ್ ಪ್ರತಿಗಳನ್ನು ಲೆಕ್ಕಪರಿಶೋಧಕರಿಂದ ದೃಢೀಕರಿಸಿ ನೀಡುವುದು.

ಸೂಚನೆ: 12.1 ರಲ್ಲಿ ತಿಳಿಸಿರುವ ಕ್ರಮಾಂಕ ಈ, ಉ, ಊ ಮತ್ತು ಋ ರಲ್ಲಿ ತಿಳಿಸಿರುವ ದಾಖಲೆಗಳನ್ನು ಕಡ್ಡಾಯವಾಗಿ ಇ–ಪೋರ್ಟಲ್‌ನಲ್ಲಿ ಅಪಲೋಡ್ ಮಾಡುವುದು.

***ಎಲ್ಲಾ ದಾಖಲೆಗಳನ್ನು ಸಂಧಾನದಲ್ಲಿ ಸಲ್ಲಿಸಿರುವ ಬಗ್ಗೆ ಚೆಕ್‌ಲಿಸ್ಟ್‌ನ್ನು ಪರಿಶೀಲಿಸಿಕೊಳ್ಳುವುದು.***

| ಕ್ರ.ಸಂ | ಅಪ್ ಲೋಡ್ ಮಾಡಬೇಕಾಗಿರುವ ದಾಖಲಾತಿಗಳು | ಕಡ್ಡಾಯವಾಗಿ ಸಲ್ಲಿಸಬೇಕಾದ ದಾಖಲೆಗಳು |
|---|---|---|
| 1 | ಪಾನ್ ಕಾರ್ಡ್ | ಕಡ್ಡಾಯವಾಗಿ ಸಲ್ಲಿಸಬೇಕು |
| 2 | ವಿಳಾಸ ದೃಢೀಕರಣ ಪತ್ರ (Voter ID, Aadhaar Card, Bank Passbook, Passport, etc.) | ” |
| 3 | ಅರ್ಜಿ ಶುಲ್ಕದ ಡಿ.ಡಿ. | ” |
| 4 | ಇ.ಎಂ.ಡಿ ಮೊತ್ತದ ಡಿ.ಡಿ | ” |
| 5 | ಸಂಧಾನದ ಷರತ್ತು ಮತ್ತು ನಿಬಂಧನೆಗಳನ್ನು ಒಪ್ಪಿರುವ ಬಗ್ಗೆ ಸ್ವಯಂ ದೃಢೀಕರಣ ಪತ್ರ | ” |
| 6 | ಕಪ್ಪುಪಟ್ಟಿ (Black List) ಗೆ ಸೇರಿಲ್ಲದಿರುವ ಬಗ್ಗೆ ಸ್ವಯಂ ದೃಢೀಕರಣ ಪತ್ರ | ” |

I. ಅತಿ ಹೆಚ್ಚಿನ ಮೊತ್ತವನ್ನು ಬಿಡ್ ಮಾಡಿರುವ ಮತ್ತು ಸಮರ್ಪಕ ದಾಖಲೆಗಳನ್ನು ಸಲ್ಲಿಸಿರುವ ಬಿಡ್‌ದಾರರನ್ನು ಪರವಾನಗಿದಾರರನ್ನಾಗಿ ಆಯ್ಕೆ ಮಾಡಲಾಗುವುದು.

II. ಜಾಹೀರಾತು ಪ್ಯಾಕೇಜ್‌ನಲ್ಲಿ ಬಿಡ್‌ದಾರರು ಸಂಧಾನದಲ್ಲಿ ಎಲ್ಲಾ ಷರತ್ ಮತ್ತು ನಿಬಂಧನೆಗಳನ್ನು ಪೂರೈಸಿ, ನಿಗಧಿತ ಮಾಸಿಕ ಮಿತವ್ಯಯ ಪರವಾನಗಿ ಶುಲ್ಕಕ್ಕಿಂತ ಅತೀ ಹೆಚ್ಚಿನ ಮೊತ್ತವನ್ನು ನಮೂದಿಸಿದವರನ್ನು H1 ಬಿಡ್‌ದಾರರೆಂದು ಪರಿಗಣಿಸಿ ಪರವಾನಗಿದಾರರನ್ನಾಗಿ ಆಯ್ಕೆ ಮಾಡಲಾಗುವುದು.

III. ಭಾರತ ಸರ್ಕಾರ / ಕರ್ನಾಟಕ ಸರ್ಕಾರ / ಕ.ರಾ.ರ.ಸಾ.ನಿಗಮವು ಆಗಿಂದಾಗ್ಗೆ ವಿಧಿಸುವ / ಕಾಲ ಕಾಲಕ್ಕೆ ಬದಲಾಗುವ ಷರತ್ತು / ನಿಬಂಧನೆಗಳಿಗೆ ಪರವಾನಗಿದಾರರು ಬದ್ದರಾಗಿರಬೇಕು.

**4. <u>ಪರವಾನಗಿ ಅವಧಿ: ಐದು (05) ವರ್ಷಗಳು.</u>**

**5. <u>ಭದ್ರತಾ ಠೇವಣಿ:</u>**

I. ಕೆಳಕಂಡಂತೆ ನಿಗದಿತ ಭದ್ರತಾ ಠೇವಣಿ ಮೊತ್ತವನ್ನು ರಾಷ್ಟ್ರೀಕೃತ / ಶೆಡ್ಯೂಲ್ ಬ್ಯಾಂಕ್‌ನಿಂದ ಪಡೆದ ಡಿ.ಡಿ. / ಖಖಿಉಖ / ಓಇಈಖಿ ಮೂಲಕ ಪಾವತಿ ಮಾಡುವುದು.

| ಕ್ರ.ಸಂ. | ಪರವಾನಗಿ ಅವಧಿ | ಒಟ್ಟು ಪಾವತಿಸಬೇಕಿರುವ ಭದ್ರತಾ ಠೇವಣಿ |
|---|---|---|
| 1 | 5 ವರ್ಷ | ಅಂಗೀಕೃತ ಮಾಸಿಕ ಪರವಾನಗಿ ಶುಲ್ಕದ 8 ಪಟ್ಟು |

II. ಪರವಾನಗಿದಾರರು RTGS / NEFT ಮೂಲಕ ಪಾವತಿ ಮಾಡುವಾಗ ಬಸ್ ನಿಲ್ದಾಣ, ಜಾಹೀರಾತು ವಿವರ, ಪರವಾನಗಿದಾರರ ಹೆಸರನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.

III. ಭದ್ರತಾ ಠೇವಣಿ ಮೊತ್ತವನ್ನು ಡಿ.ಡಿ. ರೂಪದಲ್ಲಿ ಸಲ್ಲಿಸುವಾಗ Divisional Controller, K.S.R.T.C, Shivamogga Division ರವರ ಪದನಾಮಕ್ಕೆ ಡಿ.ಡಿ.ಪಡೆದು ಈ ಕಛೇರಿಗೆ ಸಲ್ಲಿಸುವುದು.

IV. ಭದ್ರತಾ ಠೇವಣಿಗೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ.

V. ಆಯ್ಕೆಗೊಂಡ ಪರವಾನಗಿದಾರರ ಇ.ಎಂ.ಡಿ. ಮೊತ್ತವನ್ನು ಭದ್ರತಾ ಠೇವಣಿ ಮೊತ್ತಕ್ಕೆ ಹೊಂದಾಣಿಕೆ ಮಾಡಿಕೊಂಡು, ಉಳಿಕೆ ಭದ್ರತಾ ಠೇವಣಿ ಮೊತ್ತವನ್ನು ಪಾವತಿಸಿಕೊಳ್ಳಲಾಗುವುದು.

VI. ಪರವಾನಗಿ ಅವಧಿ ಮುಕ್ತಾಯವಾದ ನಂತರ ನಿಗಮಕ್ಕೆ ಪಾವತಿಸಬೇಕಾದ ಬಾಕಿ ಶುಲ್ಕಗಳನ್ನು ಕಡಿತಗೊಳಿಸಿ ಉಳಿದ ಭದ್ರತಾ ಠೇವಣಿಯನ್ನು ಪರವಾನಗಿದಾರರಿಗೆ ಹಿಂತಿರುಗಿಸಲಾಗುವುದು.

**6. <u>ಸ್ಟ್ಯಾಂಪ್ ಶುಲ್ಕ:</u>** ಜಾಹೀರಾತುಗಳಿಗೆ ಆಯ್ಕೆಯಾದ ಪರವಾನಗಿದಾರರು ಕರ್ನಾಟಕ ಸ್ಟಾಂಪ್ ಆಕ್ಟ್ 2010ರ ಅನ್ವಯ 05 ವರ್ಷದವರೆಗಿನ ಪರವಾನಗಿ ಅವಧಿಯ ಒಟ್ಟು ಪರವಾನಗಿ ಶುಲ್ಕದ (ಪ್ರತೀ ವರ್ಷ ಶೇ.10% ಹೆಚ್ಚಳ ಸೇರಿದಂತೆ) ಸರಾಸರಿ ಮೊತ್ತದ ಮೇಲೆ ಶೇಕಡಾ 1 ರಷ್ಟು ಮತ್ತು ಭದ್ರತಾ ಠೇವಣಿಯ ಮೊತ್ತದ ಮೇಲೆ ಶೇಕಡಾ 1 ರಷ್ಟು ಸ್ಟಾಂಪ್ ಶುಲ್ಕ ಭರಿಸಿ ಕರಾರು ಒಪ್ಪಂದ ಮಾಡಿಕೊಳ್ಳಬೇಕಾಗಿರುತ್ತದೆ.

**7. <u>ಕರಾರು ಒಪ್ಪಂದ:</u>**

I. ಟೆಂಡರ್‌ನಲ್ಲಿ ಆಯ್ಕೆಯಾದ ಬಿಡ್‌ದಾರರು, ಆಯ್ಕೆ ಪತ್ರ ತಲುಪಿದ ದಿನಾಂಕದಿಂದ 15 ದಿನಗಳೊಳಗಾಗಿ ನಿಗದಿತ ಭದ್ರತಾ ಠೇವಣಿ ಮತ್ತು ಒಂದು ತಿಂಗಳ ಮುಂಗಡ ಮಾಸಿಕ ಪರವಾನಗಿ ಶುಲ್ಕವನ್ನು ಪಾವತಿಸಿ, ಕರ್ನಾಟಕ ಸ್ಟ್ಯಾಂಪ್ ಕಾಯಿದೆ ಪ್ರಕಾರ ಸೂಕ್ತ ಮೌಲ್ಯದ ಛಾಪಾ ಕಾಗದದ ಮೇಲೆ ಕರಾರು ಒಪ್ಪಂದ ಮಾಡಿಕೊಳ್ಳಬೇಕು.

II. ಆಯ್ಕೆಯಾದ ಬಿಡ್‌ದಾರರು, ಆಯ್ಕೆ ಪತ್ರ ತಲುಪಿದ 15 ದಿನಗಳೊಳಗೆ ಕರಾರು ಒಪ್ಪಂದ ಮಾಡಿಕೊಳ್ಳುವಲ್ಲಿ ವಿಫಲರಾದಲ್ಲಿ, ಸದರಿ ಬಿಡ್‌ದಾರರ ಇ.ಎಂ.ಡಿ. ಮೊತ್ತವನ್ನು ನಿಗಮಕ್ಕೆ ಆದ ನಷ್ಟಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

III. ಜಾಹೀರಾತು ಪ್ಯಾಕೇಜ್‌ಗೆ ಹೊಸದಾಗಿ ಆಯ್ಕೆಯಾದ ಪರವಾನಗಿದಾರರಿಗೆ ಫ್ಯಾಬ್ರಿಕೇಶನ್ ಕೆಲಸಗಳಿಗಾಗಿ ಕರಾರು ಒಪ್ಪಂದದ ದಿನಾಂಕದಿಂದ 10 ದಿನಗಳ ಅವಧಿಯನ್ನು ಶುಲ್ಕ ರಹಿತ ಅವಧಿಯೆಂದು ಪರಿಗಣಿಸಲಾಗುವುದು. ಸದರಿ ಅವಧಿಯು ಒಟ್ಟಾರೆ ಕರಾರಿನ ಅವಧಿಯೊಳಗೆ ಸೇರಿರುತ್ತದೆ.

IV. ಕರಾರು ಒಪ್ಪಂದ ಮಾಡಿಕೊಂಡು ವ್ಯವಹಾರ ನಡೆಸದೇ ಇದ್ದಲ್ಲಿ ಅಂತಹ ಪರವಾನಿಗೆದಾರರ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಮುಂದಿನ 02 ವರ್ಷಗಳ ಅವಧಿಗೆ ಕ.ರಾ.ರ.ಸಾ.ನಿಗಮ/ವಾ.ಕ.ರ.ಸಾ.ಸಂಸ್ಥೆ/ಈ.ಕ.ರ.ಸಾ.ಸಂಸ್ಥೆ/ ಬೆ.ಮ.ಸಾ.ಸಂಸ್ಥೆ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್‌ನಲ್ಲಿ ಭಾಗವಹಿಸದಂತೆ ಸದರಿ ಪರವಾನಗಿದಾರರನ್ನು ಕಪ್ಪುಪಟ್ಟಿಗೆ ಸೇರಿಸಲಾಗುವುದು.

**8. ಮಾಸಿಕ ಪರವಾನಗಿ ಶುಲ್ಕ ಮತ್ತು ಸರಕು & ಸೇವಾ ತೆರಿಗೆ (GST) ಪಾವತಿ:**

I. ಪರವಾನಗಿದಾರರು ಕರಾರು ಒಪ್ಪಂದ ಪ್ರಾರಂಭದ ಮಾಹೆಯ ಮುಂಗಡ ಮಾಸಿಕ ಪರವಾನಗಿ ಶುಲ್ಕವನ್ನು ಡಿ.ಡಿ. ಮೂಲಕ ಭದ್ರತಾ ಠೇವಣಿ ಜೊತೆ ಸಲ್ಲಿಸುವುದು.

II. ಪರವಾನಗಿದಾರರು ಪ್ರತಿ ಮಾಹೆ 07 ನೇ ತಾರೀಖಿನೊಳಗಾಗಿ ಮಾಸಿಕ ಪರವಾನಗಿ ಶುಲ್ಕ ಮತ್ತು ಸರಕು & ಸೇವಾ ತೆರಿಗೆ ಶುಲ್ಕವನ್ನು, ಪ್ರಸ್ತುತ ಶೇ.18, ಮುಂಗಡವಾಗಿ ನಿಗಮಕ್ಕೆ ಪಾವತಿಸಬೇಕು.

III. ಪರವಾನಗಿದಾರರು ಮಾಸಿಕ ಪರವಾನಗಿ ಶುಲ್ಕ ಮತ್ತು ಸರಕು & ಸೇವಾ ತೆರಿಗೆ ಪಾವತಿಸಲು ಇನ್‌ವಾಯ್ಸ್ ಅನ್ನು ಪ್ರತಿ ತಿಂಗಳ 3ನೇ ತಾರೀಖಿನೊಳಗೆ ಪಡೆದುಕೊಳ್ಳುವುದು.

IV. ಇನ್‌ವಾಯ್ಸ್‌ನಲ್ಲಿ ನಮೂದಿಸಿದ ಪೂರ್ಣ ಮೊತ್ತವನ್ನು ಪರವಾನಗಿದಾರರು ಪಾವತಿಸಬೇಕಿರುತ್ತದೆ. ಒಂದು ವೇಳೆ ಇನ್‌ವಾಯ್ಸ್ ಮೊತ್ತ ಪಾವತಿಸಲು ಪರವಾನಗಿದಾರರು ತಡಮಾಡಿದಲ್ಲಿ, ಬಾಕಿ ಪರವಾನಗಿ ಶುಲ್ಕ ಮತ್ತು ಸರಕು & ಸೇವಾ ತೆರಿಗೆ ಮೇಲೂ ವಾರ್ಷಿಕ ಶೇ.18ರಷ್ಟು ಬಡ್ಡಿಯನ್ನು ಕನಿಷ್ಠ ರೂ.100/– ರಂತೆ, ವಿಳಂಬದ ದಿನಗಳ ಲೆಕ್ಕದಲ್ಲಿ ವಿಧಿಸಲಾಗುವುದು.

V. ಪರವಾನಗಿದಾರರು GST ನೊಂದಣಿ ಮತ್ತು ಇದಕ್ಕೆ ಪೂರಕವಾದ ದಾಖಲೆಗಳನ್ನು ಲಭ್ಯವಿದ್ದಲ್ಲಿ ಈ ಕಚೇರಿಗೆ ಸಲ್ಲಿಸುವುದು.

VI. ಮಾಸಿಕ ಪರವಾನಗಿ ಶುಲ್ಕವು ಪ್ರತಿ ವರ್ಷ ಶೇ.10 ರಷ್ಟು ಹೆಚ್ಚಳವಾಗುವುದು. ಇದಕ್ಕನುಗುಣವಾಗಿ ಸರಕು & ಸೇವಾ ತೆರಿಗೆಯು ಹೆಚ್ಚಳವಾಗುವುದು.

VII. ಮಾಸಿಕ ಪರವಾನಗಿ ಶುಲ್ಕ, ಸರಕು & ಸೇವಾ ತೆರಿಗೆ ಮತ್ತು ಇತರೆ ಶುಲ್ಕಗಳನ್ನು ಸಂಬಂಧಿಸಿದ ವಿಭಾಗ / ಘಟಕ / ಬಸ್ ನಿಲ್ದಾಣದ ಲೆಕ್ಕ ಪತ್ರ ಶಾಖೆಯಲ್ಲಿ, ಆಆ(ರಾಷ್ಟ್ರೀಕೃತ/ಶೆಡ್ಯೂಲ್ ಬ್ಯಾಂಕುಗಳ)/ RTGS/NEFT ಮೂಲಕ ಪಾವತಿಸಿಕೊಳ್ಳಲಾಗುವುದು. ಪರವಾನಗಿದಾರರು ಖಿಲಿಉಖ / ಓಇಈಖ ಮೂಲಕ ಪಾವತಿ ಮಾಡುವಾಗ ಬಸ್ ನಿಲ್ದಾಣ, ಜಾಹೀರಾತು ವಿವರ, ಪರವಾನಗಿದಾರರ ಹೆಸರು ಮತ್ತು ಮಾಹೆಯನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು. ನಗದು ಕೌಂಟರ್‌ನಲ್ಲಿ, ಭಾರತೀಯ ರಿಜರ್ವ್ ಬ್ಯಾಂಕ್ ನಿಗದಿಪಡಿಸಿದ ಮಿತಿಯಲ್ಲಿ ನಗದು ರೂಪದಲ್ಲಿ ಸ್ವೀಕರಿಸಲಾಗುವುದು.

VIII. ಪರವಾನಗಿದಾರರು ಪ್ರತಿ ತಿಂಗಳು ಪಾವತಿಸುವ ಮೊತ್ತವನ್ನು ಕ್ರಮವಾಗಿ ಬಾಕಿಯಿರುವ ಸರಕು & ಸೇವಾ ತೆರಿಗೆ, ವಿದ್ಯುಚ್ಛಕ್ತಿ ಬಳಕೆ ಶುಲ್ಕ, ಬಾಕಿ ಪರವಾನಗಿ ಶುಲ್ಕದ ಬಡ್ಡಿ, ಬಾಕಿ ಪರವಾನಗಿ ಶುಲ್ಕಗಳಿಗೆ ಸರಿದೂಗಿಸಿಕೊಂಡ ನಂತರ ಪ್ರಸಕ್ತ ತಿಂಗಳ ಸರಕು & ಸೇವಾ ಶುಲ್ಕ ಮತ್ತು ಮಾಸಿಕ ಪರವಾನಗಿ ಶುಲ್ಕಕ್ಕೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.

**9. <u>ವಿದ್ಯುಚ್ಛಕ್ತಿ ಹಾಗೂ ನೀರಿನ ಬಿಲ್ಲುಗಳ ಪಾವತಿ:</u>**

I. ಆಯ್ಕೆಯಾಗುವ ಪರವಾನಗಿದಾರರು ಜಾಹೀರಾತುಗಳನ್ನು ತಮ್ಮ ಸ್ವಂತ ಖರ್ಚಿನಲ್ಲಿ ಅಳವಡಿಸಿಕೊಳ್ಳಬೇಕು, ಇದಕ್ಕಾಗಿ ಪ್ರತ್ಯೇಕವಾಗಿ ವಿದ್ಯುಚ್ಛಕ್ತಿ ಮೀಟರ್‌ನ್ನು ಅಳವಡಿಸುವುದು.

II. ಪ್ರತಿ ಮಾಹೆಯ ವಿದ್ಯುಚ್ಛಕ್ತಿ ಬಿಲ್ಲುಗಳನ್ನು ನಿಗದಿತ ಸಮಯದಲ್ಲಿ ಪಾವತಿಸಬೇಕು.

**10.<u>ಹೆಚ್ಚುವರಿ ಸ್ಥಳಾವಕಾಶ</u> :** ಪರವಾನಗಿದಾರರು ಟೆಂಡರ್/ಕರಾರು ಒಪ್ಪಂದದಲ್ಲಿ ನಮೂದಿಸಿದ ಸ್ಥಳದ ವಿಸ್ತೀರ್ಣಕ್ಕಿಂತ ಆ ವಾಣಿಜ್ಯ ಮಳಿಗೆಗೆ ಹೊಂದಿಕೊಂಡಂತೆ ಇರುವ ಹೆಚ್ಚುವರಿ ಸ್ಥಳವನ್ನು ಅನಧಿಕೃತವಾಗಿ ಬಳಸಿಕೊಳ್ಳುವುದು ನಿಯಮ ಬಾಹಿರವಾಗಿರುತ್ತದೆ.

**11.<u>ಅನಧಿಕೃತವಾಗಿ ಹೆಚ್ಚುವರಿ ಸ್ಥಳಾವಕಾಶದ ಬಳಕೆ:</u>**

ಪರವಾನಗಿದಾರರು ಅನಧಿಕೃತವಾಗಿ ಬಳಸಿದ ಹೆಚ್ಚುವರಿ ಸ್ಥಳಾವಕಾಶವನ್ನು ನೋಟಿಸ್ ನೀಡಿದ ಕೂಡಲೇ ತೆರವುಗೊಳಿಸಬೇಕು. ಇದಲ್ಲದೆ, ಪರವಾನಗಿದಾರರಿಗೆ ಕೆಳಕಂಡಂತೆ ದಂಡ ವಿಧಿಸಲಾಗುವುದು ಹಾಗೂ ಕರಾರನ್ನು ರದ್ದುಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

| | | |
|---|---|---|
| ಮೊದಲ ಬಾರಿಗೆ | ಉಪಯೋಗಿಸಿದ ಹೆಚ್ಚುವರಿ ಸ್ಥಳಕ್ಕೆ ಮಾಸಿಕ ಪರವಾನಗಿ ಶುಲ್ಕದ 3 ಪಟ್ಟು ಪ್ರೋರೇಟಾ ದರಕ್ಕನುಗುಣವಾಗಿ ದಂಡ ವಿಧಿಸಲಾಗುವುದು | ದಂಡವನ್ನು ಕನಿಷ್ಠ 1 ತಿಂಗಳು, ಗರಿಷ್ಠ ಉಪಯೋಗಿಸಿದ ಒಟ್ಟು ದಿನಗಳಿಗೆ ವಿಧಿಸಲಾಗುವುದು. |
| ಎರಡನೇ ಬಾರಿಗೆ ಹಾಗೂ | ಉಪಯೋಗಿಸಿದ ಹೆಚ್ಚುವರಿ ಸ್ಥಳಕ್ಕೆ ಮಾಸಿಕ ಪರವಾನಗಿ ಶುಲ್ಕದ 5 ಪಟ್ಟು | ದಂಡವನ್ನು ಕನಿಷ್ಠ 1 ತಿಂಗಳು, ಗರಿಷ್ಠ ಉಪಯೋಗಿಸಿದ |

| | | |
|---|---|---|
| ಮನರಾವರ್ತನೆಗೊಂಡಲ್ಲಿ | ಪ್ರೋರೇಟಾ ದರಕ್ಕನುಗುಣವಾಗಿ ದಂಡ ವಿಧಿಸಲಾಗುವುದು. ಇದಲ್ಲದೆ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು, ಕರಾರನ್ನು ರದ್ದುಪಡಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ. | ಒಟ್ಟು ದಿನಗಳಿಗೆ ವಿಧಿಸಲಾಗುವುದು. |

**12.**ಪರವಾನಗಿ ಪಡೆದ ಸ್ಥಳದಲ್ಲಿ ಸಂಧಾನದಲ್ಲಿ ನಿಗದಿಪಡಿಸಿದ ವ್ಯವಹಾರವನ್ನು ಹೊರತುಪಡಿಸಿ ಇತರೆ ವ್ಯವಹಾರವನ್ನು ನಡೆಸಲು ಅವಕಾಶವಿರುವುದಿಲ್ಲ.

**13.ಕರಾರು ರದ್ಧತಿಯ ಷರತ್ತುಗಳು:**

1. **ಕನಿಷ್ಠ ಎರಡು ವರ್ಷದ ಅವಧಿಯವರಗೆ ಪರವಾನಗಿಯನ್ನು ನಡೆಸಬೇಕು.**
2. **ಒಂದು ವೇಳೆ ಎರಡು ವರ್ಷಗಳ ಒಳಗೆ 02 ನೇ ಪಾರ್ಟಿಯವರು ಜಾಹೀರಾತು ರದ್ದುಪಡಿಸಿಕೊಳ್ಳಲು ಇಚ್ಚಿಸಿದ್ದಲ್ಲಿ, 06 ತಿಂಗಳ ಮುಂಗಡ ನೋಟಿಸ್ ನೀಡಿ, ಮುಂಗಡ ನೋಟಿಸ್ ನೀಡುವ ಸಮಯದಲ್ಲಿ ಯಾವುದೇ ಹಿಂಬಾಕಿ ಇರುವಂತಿಲ್ಲ, ನಂತರ ನೋಟಿಸ್ ನೀಡಿದ 06 ತಿಂಗಳ ಅವಧಿಯಲ್ಲಿ ಮಳಿಗೆಯನ್ನು ನಡೆಸಬೇಕು ಹಾಗೂ ಆಯಾ ತಿಂಗಳು ಮುಂಗಡವಾಗಿ ಪರವಾನಗಿ ಶುಲ್ಕ ಪಾವತಿಸಲು ಬದ್ದನಾಗಿರಬೇಕು.**
3. **ಒದು ವೇಳೆ ಎರಡು ವರ್ಷದೊಳಗೆ ಪರವಾನಗಿ ರದ್ದತಿ ಮಾಡಿಕೊಂಡಲ್ಲಿ / ಮನವಿ ಸಲ್ಲಿಸಿದ್ದಲ್ಲಿ 02 ನೇ ಪಾರ್ಟಿಯವರು ಪಾವತಿಸಿರುವ ಭದ್ರತಾ ಠೇವಣಿ ಮೊತ್ತವನ್ನು ಪೂರ್ಣವಾಗಿ ಮುಟ್ಟುಗೋಲು ಹಾಕಿಕೊಳ್ಳುವುದು ಹಾಗೂ ಸದರಿಯವರನ್ನು ಅಂತಹ ಬಿಡ್‌ದಾರರನ್ನು / ಪರವಾನಗಿದಾರರನ್ನು ಮುಂದಿನ 02 ವರ್ಷಗಳ ಅವಧಿಗೆ ಕ.ರಾ.ರ.ಸಾ.ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್‌ನಲ್ಲಿ ಭಾಗವಹಿಸದಂತೆ ಕಪ್ಪುಪಟ್ಟಿಗೆ ಸೇರಿಸಲಾಗುವುದು. ಈ ಷರ್ತುಗಳಿಗೆ ಬದ್ದನಾಗಿರಬೇಕು.**
4. **.ಎರಡು ವರ್ಷದ ನಂತರ ಕರಾರು ರದ್ದತಿ ಮಾಡಿಕೊಳ್ಳಲು 02 ನೇ ಪಾರ್ಟಿಯವರು ಇಚ್ಚಿಸಿದ್ದಲ್ಲಿ, 04 ತಿಂಗಳ ಮುಂಗಡ ನೋಟಿಸ್ ನೀಡಲು 04 ತಿಂಗಳು ಮಳಿಗೆಯನ್ನು ನಡೆಸಿ, ಆಯಾ ತಿಂಗಳು ಮುಂಗಡವಾಗಿ ಪರವಾನಗಿ ಶುಲ್ಕ ಪಾವತಿಸಲು ಅವಕಾಶ ನೀಡುವುದು. ಈ ಷರತ್ತುಗಳಿಗೆ ಬದ್ದನಾಗಿರಬೇಕು.**

**14.ಬಿಡ್‌ದಾರರ / ಪರವಾನಗಿದಾರರ ಹೆಸರನ್ನು ಕಪ್ಪುಪಟ್ಟಿಗೆ ಸೇರಿಸುವ ಸಂದರ್ಭಗಳು:**

I. ಸಂಧಾನ / ಟೆಂಡರ್ ಅರ್ಹಗೊಳ್ಳುವ ಸಲುವಾಗಿ ಬಿಡ್‌ದಾರರು / ಪರವಾನಗಿದಾರರು ಸಲ್ಲಿಸಿರುವ ದಾಖಲೆಗಳು ಯಾವುದೇ ಹಂತದಲ್ಲಿ ನೈಜತೆಯಿಂದ ಕೂಡಿಲ್ಲದಿರುವುದು ಕಂಡುಬಂದಲ್ಲಿ, ಅಂತಹ ಬಿಡ್‌ದಾರರ ಆಯ್ಕೆ / ಪರವಾನಗಿದಾರರ ಪರವಾನಗಿಯನ್ನು ರದ್ದುಪಡಿಸಿ, ನಿಗಮದಲ್ಲಿಟ್ಟಿರುವ ಇ.ಎಂ.ಡಿ / ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಅಂತಹ ಬಿಡ್‌ದಾರರನ್ನು / ಪರವಾನಗಿದಾರರನ್ನು ಮುಂದಿನ 02 ವರ್ಷಗಳ ಅವಧಿಗೆ ಕ.ರಾ.ರ.ಸಾ.ನಿಗಮ/ಬೆಂ.ಮ.ಸಾ.ಸಂ/ ವಾ.ಕ.ರ.ಸಾ.ಸಂ/ ಈ.ಕ.ರ.ಸಾ.ಸಂಸ್ಥೆಯ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್‌ನಲ್ಲಿ ಭಾಗವಹಿಸದಂತೆ ಕಪ್ಪುಪಟ್ಟಿಗೆ ಸೇರಿಸಲಾಗುವುದು.

II. ಬಿಡ್‌ದಾರರು ಬಿಡ್ ಹಿಂದಕ್ಕೆ ಪಡೆದಲ್ಲಿ ಅಥವಾ ತಿದ್ದುಪಡಿಗೊಳಿಸಿದಲ್ಲಿ ಅಥವಾ ಅಗೌರವ ತರುವಂತಹ ಸಂದರ್ಭಗಳಲ್ಲಿ, ಇ.ಎಂ.ಡಿ. ಮೊತ್ತ ಮುಟ್ಟುಗೋಲು ಹಾಕಿಕೊಂಡು, ಮುಂದಿನ 02 ವರ್ಷಗಳ ಅವಧಿಗೆ ಕ.ರಾ.ರ.ಸಾ.ನಿಗಮ/ಬೆಂ.ಮ.ಸಾ.ಸಂ/ ವಾ.ಕ.ರ.ಸಾ.ಸಂ/ ಈ.ಕ.ರ.ಸಾ.ಸಂಸ್ಥೆಯ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್‌ನಲ್ಲಿ ಭಾಗವಹಿಸದಂತೆ ಕಪ್ಪುಪಟ್ಟಿಗೆ ಸೇರಿಸಲಾಗುವುದು.

III. 02 ವರ್ಷದ ಅವಧಿಯೊಳಗೆ ಯಾವುದೇ ಕಾರಣದಿಂದ ಪರವಾನಗಿ ರದ್ದುಗೊಳ್ಳುವಂತಹ ಮತ್ತು 02 ವರ್ಷದ ಅವಧಿಯೊಳಗೆ ಪರವಾನಗಿಯನ್ನು ರದ್ದುಪಡಿಸುವಂತೆ ಮನವಿ ಸಲ್ಲಿಸುವ ಪರವಾನಗಿದಾರರನ್ನು, ಮನವಿ ಸಲ್ಲಿಸಿದ ದಿನಾಂಕದಿಂದ ಮುಂದಿನ 02 ವರ್ಷಗಳ ಅವಧಿಗೆ ಕ.ರಾ.ರ.ಸಾ.ನಿಗಮ/ಬೆಂ.ಮ.ಸಾ.ಸಂ/ ವಾ.ಕ.ರ.ಸಾ.ಸಂ/ ಈ.ಕ.ರ.ಸಾ.ಸಂಸ್ಥೆಯ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್/ಸಂಧಾನದಲ್ಲಿ ಭಾಗವಹಿಸದಂತೆ ಕಪ್ಪುಪಟ್ಟಿಗೆ ಸೇರಿಸಲಾಗುವುದು.

IV. ಪರವಾನಗಿ ಅವಧಿಯ ಯಾವುದೇ ಸಮಯದಲ್ಲಿ ಜಾಹೀರಾತು ಪ್ಯಾಕೇಜ್‌ನ್ನು ಉಪ–ಪರವಾನಗಿಗೆ ನೀಡಿರುವುದು ಕಂಡು ಬಂದಲ್ಲಿ, ಪರವಾನಗಿಯನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ರದ್ದುಪಡಿಸಲಾಗುವುದು ಹಾಗೂ ಭದ್ರತಾ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು, ಕರಾರು ರದ್ದುಪಡಿಸಿದ ದಿನಾಂಕದಿಂದ ಮುಂದಿನ 02 ವರ್ಷಗಳ ಅವಧಿಗೆ ಕ.ರಾ.ರ.ಸಾ.ನಿಗಮ/ಬೆಂ.ಮ.ಸಾ.ಸಂ/ ವಾ.ಕ.ರ.ಸಾ.ಸಂ/ ಈ.ಕ.ರ.ಸಾ.ಸಂಸ್ಥೆಯ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್‌ನಲ್ಲಿ ಭಾಗವಹಿಸದಂತೆ ಸದರಿ ಪರವಾನಗಿದಾರರನ್ನು ಕಪ್ಪುಪಟ್ಟಿಗೆ ಸೇರಿಸಲಾಗುವುದು.

V. ಕಪ್ಪು ಪಟ್ಟಿಗೆ ಸೇರಿದ ಪರವಾನಗಿದಾರರು ನಿಗಮದ ಯಾವುದೇ ಟೆಂಡರ್ / ಸಂಧಾನದಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಅಂತಹ ಬಿಡ್‌ದಾರರು / ಅರ್ಜಿದಾರರು ಒಂದು ವೇಳೆ ಟೆಂಡರ್ / ಸಂಧಾನದಲ್ಲಿ ಭಾಗವಹಿಸಿದಲ್ಲಿ, ಯಾವುದೇ ಹಂತದಲ್ಲಿ ಅವರ ಇ.ಎಂ.ಡಿ. ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

**15.<u>ಇತರೆ ಷರತ್ತು ಮತ್ತು ನಿಬಂಧನೆಗಳು.</u>**

1. **ಸಂಧಾನದಲ್ಲಿಆಯ್ಕೆಯಾಗದ ಬಿಡ್‌ದಾರುಗಳ (H1, H2 &H3 ಹೊರತುಪಡಿಸಿ) ಇ.ಎಂ.ಡಿ. ಮೊತ್ತವನ್ನು ಸಂಧಾನ ಅಂತಿಮಗೊಂಡ ನಂತರ ಹಿಂದಿರುಗಿಸಲಾಗುವುದು. H2 &H3 ಬಿಡ್‌ದಾರರ ಇ.ಎಂ.ಡಿ. ಮೊತ್ತವನ್ನು H1 ಬಿಡ್‌ದಾರರು ಕರಾರು ಒಪ್ಪಂದ ಮಾಡಿಕೊಂಡ ನಂತರ ಹಿಂದಿರುಗಿಸಲಾಗುವುದು.**
2. ಸಂಧಾನದಲ್ಲಿ ಅತಿ ಹೆಚ್ಚು ಮೊತ್ತವನ್ನು ಬಿಡ್‌ಮಾಡಿ ಪರವಾನಗಿದಾರರಾಗಿ ಆಯ್ಕೆಯಾದ ಬಿಡ್‌ದಾರರು ನಿಗದಿತ ದಿನಾಂಕದೊಳಗಾಗಿ ಭದ್ರತಾ ಠೇವಣಿ ಹಾಗೂ ಮುಂಗಡ ಮಾಸಿಕ ಪರವಾನಗಿ ಶುಲ್ಕಗಳನ್ನು ಪಾವತಿಸಲು ವಿಫಲರಾದಲ್ಲಿ, ಅಂತಹ ಬಿಡ್‌ದಾರರ ಇ.ಎಂ.ಡಿ. ಮೊತ್ತವನ್ನು ನಿಗಮಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

3. ಒಂದು ವೇಳೆ ಆಯ್ಕೆಯಾದ ಬಿಡ್‌ದಾರರು ಭದ್ರತಾ ಠೇವಣಿ ಮತ್ತು ಮುಂಗಡ ಮಾಸಿಕ ಪರವಾನಗಿ ಶುಲ್ಕಗಳನ್ನು ಪಾವತಿಸಿ, ನಿಗದಿತ ದಿನಾಂಕದೊಳಗಾಗಿ ಕರಾರು ಒಪ್ಪಂದವನ್ನು ಮಾಡಿಕೊಳ್ಳಲು ವಿಫಲರಾದಲ್ಲಿ, ಅಂತಹ ಬಿಡ್‌ದಾರರ ಭದ್ರತಾ ಠೇವಣಿ ಹಾಗೂ ಮುಂಗಡ ಮಾಸಿಕ ಪರವಾನಗಿ ಶುಲ್ಕಗಳನ್ನು ನಿಗಮಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
4. **H2 &H3** ಬಿಡ್‌ದಾರರನ್ನು ಪರವಾನಗಿದಾರರಾಗಿ ಆಯ್ಕೆ ಮಾಡಿದಾಗ, ಅವರು ಕರಾರು ಒಪ್ಪಂದ ಮಾಡಿಕೊಳ್ಳಲು ವಿಫಲರಾದಲ್ಲಿ, ಅವರ ಇ.ಎಂ.ಡಿ. ಮೊತ್ತವನ್ನು ಸಹ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
5. ಪರವಾನಗಿ ಪಡೆದ ಪರವಾನಗಿದಾರರೇ ವ್ಯವಹಾರ ನಡೆಸುವುದು. ಉಪ ಪರವಾನಗಿಗೆ ನೀಡಲು ಅವಕಾಶವಿರುವುದಿಲ್ಲ.
6. ಅಗ್ನಿ ಅವಘಡ ಹಾಗೂ ಇತರೇ ನೈಸರ್ಗಿಕ ದುರಂತಗಳಿಂದ ಜಾಹೀರಾತುಗಳಿಗೆ ಹಾನಿಯುಂಟಾದಲ್ಲಿ ನಿಗಮವು ಜವಾಬ್ದಾರಿಯಾಗಿರುವುದಿಲ್ಲ.
7. ಮುಷ್ಕರ / ಬಂದ್ ಅವಧಿಯಲ್ಲಿ ಮಾಸಿಕ ಪರವಾನಗಿ ಶುಲ್ಕದಲ್ಲಿ ರಿಯಾಯಿತಿಗೆ ಅವಕಾಶವಿರುವುದಿಲ್ಲ.
8. ಪರವಾನಗಿದಾರರು ತಮ್ಮ ವ್ಯವಹಾರಕ್ಕೆ ಸಂಬಂಧಿಸಿದ ಜಿ.ಎಸ್.ಟಿ., ಆದಾಯ ತೆರಿಗೆ, ಭವಿಷ್ಯ ನಿಧಿ, ಇ.ಎಸ್.ಐ, ಸೇಲ್ಸ್ ಟ್ಯಾಕ್ಸ್ ಕ್ಲಿಯರೆನ್ಸ್ ಪ್ರಮಾಣ ಪತ್ರ, ಟ್ರೇಡ್ ಲೈಸೆನ್ಸ್, ಲೇಬರ್ ಲೈಸೆನ್ಸ್, ಇತ್ಯಾದಿ ಪ್ರಮಾಣಪತ್ರಗಳನ್ನು ಹೊಂದಿರಬೇಕು. ನಿಗಮವು & ಸರ್ಕಾರದ ಇತರ ಇಲಾಖೆಯವರು ದಾಖಲೆಗಳನ್ನು ಹಾಜರುಪಡಿಸಲು ಕೋರಿದ್ದಲ್ಲಿ ಸಂಬಂಧಿಸಿದ ದಾಖಲೆಗಳನ್ನು ಕೂಡಲೇ ಸಲ್ಲಿಸಬೇಕಾಗಿರುತ್ತದೆ ಹಾಗೂ ಸದರಿ ಮಾಹಿತಿಯೊಂದಿಗೆ ದಾಖಲೆಗಳ ಪ್ರತಿಗಳನ್ನು ಈ ಕಛೇರಿಗೂ ಸಲ್ಲಿಸುವುದು.
9. **<u>ಸ್ಥಳೀಯ ಇಲಾಖೆ / ಪ್ರಾಧಿಕಾರಗಳು ವಿಧಿಸುವ ತೆರಿಗೆಯನ್ನು ಪರವಾನಗಿದಾರರೇ ಸಂಬಂಧಿಸಿದ ಇಲಾಖೆ / ಪ್ರಾಧಿಕಾರಗಳಿಗೆ ಸಂದಾಯ ಮಾಡಲು ಜವಾಬ್ದಾರರಾಗಿರುತ್ತಾರೆ.</u>**
10. ಪರವಾನಗಿದಾರರು ಜಾಹೀರಾತುಗಳನ್ನು ಪ್ರದರ್ಶಿಸಲು ಅವಶ್ಯಕವಿರುವ ಕಾರ್ಯನಿರ್ವಹಣೆಯನ್ನು ಆಯಾ ಕ್ಷೇತ್ರದ ಏಜೆನ್ಸಿಗಳಿಂದ ಪಡೆಯಬಹುದಾಗಿರುತ್ತದೆ. ಆದರೆ ಪೂರ್ಣವಾಗಿ ಜಾಹೀರಾತು ಪ್ಯಾಕೇಜ್‌ನ್ನು ಉಪ-ಪರವಾನಗಿ ನೀಡುವಂತಿಲ್ಲ. ಪರವಾನಗಿ ಪಡೆದ ಪರವಾನಗಿದಾರರೇ ಜಾಹೀರಾತು ಪ್ಯಾಕೇಜ್‌ಗಳನ್ನು ನಿರ್ವಹಿಸುವುದು.
11. ಜಾಹೀರಾತು / ಹೋರ್ಡಿಂಗ್‌ಗಳನ್ನು ಅಳವಡಿಸುವ ಸಮಯದಲ್ಲಿ ವಾಹನಗಳ/ಸಾರ್ವಜನಿಕ ಪ್ರಯಾಣಿಕರ ಸಂಚಾರಕ್ಕೆ ಹಾಗೂ ಬಸ್ ನಿಲ್ದಾಣದ ಕಟ್ಟಡದ ಅಂದ-ಚೆಂದಕ್ಕೆ ಯಾವುದೇ ರೀತಿಯ ಅಡಚಣೆಯಾಗದಂತೆ ನಿಗಾ ವಹಿಸುವುದು. ಈ ಸಂಬಂಧ ವಿಭಾಗದ ಕಾಮಗಾರಿ ಅಭಿಯಂತರರ ಮೇಲ್ವಿಚಾರಣೆಯಲ್ಲಿ ಜಾಹೀರಾತು ಅಳವಡಿಸುವುದು. ನಿಗಮದ ಬಸ್ಸು/ಆಸ್ತಿ-ಪಾಸ್ತಿಗೆ ಧಕ್ಕೆ/ ಹಾನಿ ಉಂಟಾದಲ್ಲಿ ಸದರಿ ಮೊತ್ತವನ್ನು ಪರವಾನಗಿದಾರರಿಂದ ವಸೂಲಿ ಮಾಡಲಾಗುವುದು.
12. ಜಾಹೀರಾತು / ಹೋರ್ಡಿಂಗ್ಸ್ ಪ್ರದರ್ಶಿಸಲು ಆಯ್ಕೆಯಾಗುವ ಪರವಾನಗಿದಾರರೇ ಸಂಬಂಧಿಸಿದ ಇಲಾಖೆ / ಪ್ರಾಧಿಕಾರದಿಂದ ಅನುಮತಿ ಪಡೆಯಬೇಕಿರುತ್ತದೆ.
13. ಜಾಹೀರಾತಿನಲ್ಲಿ ಪ್ರದರ್ಶಿಸುವ ವಿವರಗಳು ಅಡ್ವರ್‌ಟೈಸಿಂಗ್ ಸ್ಟ್ಯಾಂಡರ್ಡ್ ಕೌನ್ಸಿಲ್ ಆಫ್ ಇಂಡಿಯಾರವರ ನಿರ್ದೇಶನಗಳಿಗೆ (ASCI CODE) ಒಳಪಟ್ಟಿರಬೇಕು. ಇದಕ್ಕೆ ಜಾಹೀರಾತುದಾರರು ಬದ್ಧರಾಗಿರಬೇಕು.
14. ಜಾಹೀರಾತು / ಹೋರ್ಡಿಂಗ್ಸ್‌ಗಳಲ್ಲಿ ನಿಗಮ & ಇತರೆ ಸಹೋದರ ಸಂಸ್ಥೆಗಳ ವ್ಯವಹಾರಕ್ಕೆ ವ್ಯತಿರಿಕ್ತವಾದ/ನಿಗಮಗಳ ಘನತೆಗೆ ಧಕ್ಕೆ ತರುವಂತಹ ಜಾಹೀರಾತುಗಳನ್ನು ಪ್ರದರ್ಶಿಸುವಂತಿಲ್ಲ.
15. ಜಾಹೀರಾತುಗಳನ್ನು ಕನ್ನಡದಲ್ಲಿಯೂ ಪ್ರದರ್ಶಿಸುವುದು.
16. ಜಾಹೀರಾತು ಏಜೆನ್ಸಿಗೆ/ ವ್ಯವಹಾರಕ್ಕೆ ಸಂಬಂಧಿಸಿದಂತೆ ಸ್ಥಳೀಯ ಇಲಾಖೆ / ಪ್ರಾಧಿಕಾರಗಳು ವಿಧಿಸುವ ಜಾಹೀರಾತು ತೆರಿಗೆಯನ್ನು ಪರವಾನಗಿದಾರರೇ ಸಂಬಂಧಿಸಿದ ಸ್ಥಳೀಯ ಇಲಾಖೆ /ಪ್ರಾಧಿಕಾರಗಳಿಗೆ ಪಾವತಿಸಬೇಕಿರುತ್ತದೆ ಹಾಗೂ ಇದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಕಾಲ-ಕಾಲಕ್ಕೆ ಒದಗಿಸಬೇಕು.
17. ಪರವಾನಗಿದಾರರು ಹೋರ್ಡಿಂಗ್ಸ್/ಗ್ಲೋಸೈನ್ ಬೋರ್ಡ್ ಇತ್ಯಾದಿಗಳನ್ನು ಅಳವಡಿಸುವಾಗ ಹಾಗೂ ತೆರವುಗೊಳಿಸುವಾಗ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಮೇಲ್ವಿಚಾರಣೆಯಲ್ಲಿ ನಡೆಸುವುದು. ಈ ಸಮಯದಲ್ಲಿ ನಿಗಮದ ಆಸ್ತಿ-ಪಾಸ್ತಿಗೆ ಹಾನಿಯಾಗಿರುವ / ಸುರಕ್ಷಿತವಾಗಿರುವ ಬಗ್ಗೆ ಕಾಮಗಾರಿ ಶಾಖೆಯಿಂದ ದೃಢೀಕರಣ ಪಡೆದು, ನಿಗಮದ ಆಸ್ತಿ-ಪಾಸ್ತಿಗೆ ಹಾನಿ/ ಧಕ್ಕೆಯಾದಲ್ಲಿ, ಸದರಿ ಮೊತ್ತವನ್ನು ಪರವಾನಗಿದಾರರಿಂದ ವಸೂಲಿ ಮಾಡಲಾಗುವುದು.
18. ಪರವಾನಗಿದಾರರು ತಮ್ಮ ಪರವಾನಗಿ ಅವಧಿ ಮುಕ್ತಾಯವಾದ ನಂತರ ಜಾಹೀರಾತು / ಹೋರ್ಡಿಂಗ್ಸ್‌ಗಳನ್ನು ನಿಗಮದ ಕಟ್ಟಡ /ಆಸ್ತಿಗೆ ಯಾವುದೇ ಹಾನಿಯಾಗದಂತೆ ತೆರವುಗೊಳಿಸಬೇಕು. ಒಂದು ವೇಳೆ ಪರವಾನಗಿದಾರರು ನಿಗದಿತ ಸಮಯದಲ್ಲಿ ತೆರವುಗೊಳಿಸದಿದ್ದಲ್ಲಿ, ನಿಗಮದ ವತಿಯಿಂದ ತೆರವುಗೊಳಿಸಲಾಗುವುದು ಹಾಗೂ ತೆರವುಗೊಳಿಸಲು ಆಗುವ ವೆಚ್ಚವನ್ನು ಪರವಾನಗಿದಾರರ ಭದ್ರತಾ ಠೇವಣಿಯಲ್ಲಿ ಮುರಿದುಕೊಳ್ಳಲಾಗುವುದು.
19. ಪರವಾನಗಿದಾರರು ಹೋರ್ಡಿಂಗ್ಸ್/ಗ್ಲೋಸೈನ್ ಬೋರ್ಡ್ ಇತ್ಯಾದಿಗಳ ನಿರ್ಮಾಣ/ನಿರ್ವಹಣೆಯ ಸಂದರ್ಭದಲ್ಲಿ ಕಾರ್ಯನಿಮಿತ್ತ ಸಿಬ್ಬಂದಿಗಳಿಗೆ/ಸಾರ್ವಜನಿಕ ಪ್ರಯಾಣಿಕರಿಗೆ ಹಾಗೂ ಸಂಸ್ಥೆಯ ಆಸ್ತಿ-ಪಾಸ್ತಿಗಳಿಗೆ ಧಕ್ಕೆಯುಂಟಾದಲ್ಲಿ ಪ್ರಸ್ತುತ ಜಾರಿಯಲ್ಲಿರುವ ಮತ್ತು ಸರ್ಕಾರ ಜಾರಿಗೊಳಿಸಬಹುದಾದ ಎಲ್ಲಾ ಕಾನೂನು ನಿಯಮಗಳಡಿ ಪರವಾನಗಿದಾರರೇ ಹೊಣೆಗಾರರಾಗಿರುತ್ತಾರೆ.
20. ಆಯ್ಕೆಗೊಂಡ ಪರವಾನಗಿದಾರರು ಎಲೆಕ್ಟ್ರಿಕಲ್ ಅಳವಡಿಕೆ/ಬೆಳಕಿನ ಅಳವಡಿಕೆ /ವೈರಿಂಗ್ ಇತ್ಯಾದಿ ಸುರಕ್ಷತಾ ಕ್ರಮಗಳ ಸಂಬಂಧ ನಿಗದಿತ ಪ್ರಾಧಿಕಾರಿಗಳಿಂದ ಪಡೆದ ದೃಢೀಕರಣ ಪತ್ರದ ಪ್ರತಿಯನ್ನು ಸಲ್ಲಿಸುವುದು. ವಿದ್ಯುತ್ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವುದು ಪರವಾನಗಿದಾರರ ಜವಾಬ್ದಾರಿಯಾಗಿರುತ್ತದೆ.
21. ಆಯ್ಕೆಗೊಂಡ ಪರವಾನಗಿದಾರರು ಅಳವಡಿಸಲು ಪ್ರಸ್ತಾಪಿಸುವ ಹೋರ್ಡಿಂಗ್ಸ್‌ಗಳಿಗೆ ಬೆಂಬಲವಾಗಿ ನಿಲ್ಲಿಸುವ ವಿನ್ಯಾಸಗಳಿಗೆ (Structure)ನೊಂದಾಯಿತ ವಿನ್ಯಾಸ ಅಭಿಯಂತರರು/ ಸಂಬಂಧಿಸಿದ ಪ್ರಾಧಿಕಾರಗಳಿಂದ ದೃಢೀಕರಣವನ್ನು ಪಡೆದ ಪ್ರತಿಯನ್ನು ವಿಭಾಗೀಯ ನಿಯಂತ್ರಣಾಧಿಕಾರಿಯವರಿಗೆ ಪರಿಶೀಲನೆಗೆ ಸಲ್ಲಿಸುವುದು. ಒಂದು ವೇಳೆ ರಚನೆ/ವಿನ್ಯಾಸ/ಯೋಜನೆಯಲ್ಲಿ ನ್ಯೂನ್ಯತೆಯಿದ್ದಲ್ಲಿ 05 ದಿನಗಳೊಳಗೆ ಸರಿಪಡಿಸುವುದು. ಇಲ್ಲದಿದ್ದಲ್ಲಿ ನಿಗಮವು ನ್ಯೂನ್ಯತಾ ಕೆಲಸವನ್ನು ಅಥವಾ ಭಾಗವನ್ನು ತೆರವುಗೊಳಿಸಲು ಅಥವಾ ಸಂಬಂಧಿಸಿದ ಪರವಾನಗಿದಾರರಿಂದ ವೆಚ್ಚವನ್ನು ಮರುಪಾವತಿಸಿಕೊಳ್ಳಲಾಗುವುದು.
22. ನಿಗಮದ ನಿಲ್ದಾಣಗಳಲ್ಲಿ, ಘಟಕಗಳಲ್ಲಿ ಅಥವಾ ಇನ್ನಾವುದೇ ಸ್ಥಳಗಳಲ್ಲಿ ಗೋಡೆ ಬರಹಗಳಿಗೆ ಅವಕಾಶವಿರುವುದಿಲ್ಲ.

23. ಆಯ್ಕೆಗೊಂಡ ಪರವಾನಗಿದಾರರು, ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆ (Employees Provident Fund Organisation) ರವರಲ್ಲಿ ನೊಂದಣಿ ಮಾಡಿಸಿಕೊಂಡಿರಬೇಕು. ನಿಗಮದ ಜಾಹೀರಾತು ಪ್ಯಾಕೇಜ್ ಸಲುವಾಗಿ ಬಳಸಿಕೊಳ್ಳುವ ನೌಕರರು / ಸಿಬ್ಬಂದಿಗಳಿಗೆ ಪ್ರತಿ ತಿಂಗಳು ಮಾಸಿಕ ಭವಿಷ್ಯ ನಿಧಿ ವಂತಿಕೆಯನ್ನು ಆರ್.ಪಿ.ಎಫ್.ಸಿ. ರವರಿಗೆ ಜಮಾ ಮಾಡಬೇಕು. ಸಂಬಂಧಿಸದಿದ್ದಲ್ಲಿ ಸ್ವಯಂ ಘೋಷಣಾ ಪತ್ರವನ್ನು ಸಲ್ಲಿಸುವುದು.
24. ಆಯ್ಕೆಗೊಂಡ ಪರವಾನಗಿದಾರರು, ನಿಗಮದ ಜಾಹೀರಾತು ಪ್ಯಾಕೇಜ್ ಸಲುವಾಗಿ ಬಳಸಿಕೊಳ್ಳುವ ನೌಕರರು/ ಸಿಬ್ಬಂದಿಗಳಿಗೆ ಕಾರ್ಮಿಕ ಇಲಾಖೆಯ ನಿಯಮಾವಳಿಗಳನ್ವಯ ಪಿ.ಎಫ್ / ಇಎಸ್ಐ ಸೌಲಭ್ಯ ವಿಸ್ತರಿಸಿರುವ ಬಗ್ಗೆ ಅಗತ್ಯ ದಾಖಲಾತಿ ಒದಗಿಸುವುದು. ಸಂಬಂಧಿಸದಿದ್ದಲ್ಲಿ ಸ್ವಯಂ ಘೋಷಣಾ ಪತ್ರವನ್ನು ಸಲ್ಲಿಸುವುದು.
25. ಪರವಾನಗಿದಾರರು ಬಾಲ ಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಳ್ಳುವಂತಿಲ್ಲ.
26. ಟೆಂಡರ್/ಸಂಧಾನ ಪ್ರಕಟಣೆಯಲ್ಲಿ ಆಯ್ಕೆಯಾದವರು ತಮ್ಮ ಸ್ವಂತ ಖರ್ಚಿನಲ್ಲಿ ಕರ್ನಾಟಕ ಸ್ಟಾಂಪ್ ಆಕ್ಟ್‌ನಂತೆ ಸ್ಟಾಂಪ್ ಶುಲ್ಕವನ್ನು ಭರಿಸಿ ಕರಾರು ಒಪ್ಪಂದ ಮಾಡಿಕೊಳ್ಳಬೇಕಾಗಿರುತ್ತದೆ.
27. ಸಂಧಾನದಲ್ಲಿ ಭಾಗವಹಿಸುವ ಅರ್ಜಿದಾರರು/ಬಿಡ್‌ದಾರರು ನಿಗಮಕ್ಕೆ ಯಾವುದೇ ಷರತ್ತುಗಳನ್ನು ಹಾಕುವಂತಿಲ್ಲ, ನಿಗಮವು ಕಾಲಕಾಲಕ್ಕೆ ವಿಧಿಸುವ ಎಲ್ಲಾ ಷರತ್ತುಗಳನ್ನು ಒಪ್ಪಿಕೊಳ್ಳತಕ್ಕದಾಗಿರುತ್ತದೆ.
28. ಪರವಾನಗಿದಾರರು / ಬಿಡ್ಡದಾರರು ಕಡ್ಡಾಯವಾಗಿ ಪಾನ್‌ಕಾರ್ಡ್ ಹೊಂದಿರಬೇಕಾಗಿರುತ್ತದೆ.
29. ಪ್ರಸ್ತುತ ಚಾಲ್ತಿಯಲ್ಲಿರುವ ಹೋರ್ಡಿಂಗ್ಸ್ ಸ್ಥಳಗಳನ್ನು ಜಾಹೀರಾತಿನಲ್ಲಿ ತಿಳಿಸಿರುವ ದಿನಾಂಕಗಳಂದು ಹಸ್ತಾಂತರಿಸಲಾಗುವುದು ಹಾಗೂ ಸದರಿ ಸ್ಥಳಗಳ ಪರವಾನಗಿ ಅವಧಿ ಮತ್ತು ಪರವಾನಗಿ ಶುಲ್ಕದ ಅವಧಿಯು ಹಸ್ತಾಂತರಿಸಿದ ದಿನಾಂಕದಿಂದ ಪರವಾನಗಿಯ ಮುಕ್ತಾಯದ ಅವಧಿಯವರೆಗೆ ಇರುತ್ತದೆ.
30. ಯಾವುದೇ ಸಮಯದಲ್ಲಿ ಹೆಚ್ಚಿನ ಷರತ್ತು ಮತ್ತು ನಿಬಂಧನೆಗಳನ್ನು ಕರಾರಿನಲ್ಲಿ ಸೇರಿಸಲು ಮತ್ತು ಮಾರ್ಪಡಿಸಲು ನಿಗಮವು ಅಧಿಕಾರ ಹೊಂದಿರುತ್ತದೆ.
31. ಪರವಾನಗಿದಾರರು ಮತ್ತು ನಿಗಮದ ಮಧ್ಯೆ ಯಾವುದೇ ವ್ಯಾಜ್ಯ / ತಕರಾರು ಉಂಟಾದಲ್ಲಿ, ನಿಗಮದ ವ್ಯವಸ್ಥಾಪಕ ನಿರ್ದೇಶಕರು ಮಧ್ಯಸ್ಥಿಕೆದಾರರಾಗಿರುತ್ತಾರೆ. ಸದರಿಯವರ ತೀರ್ಮಾನವೇ ಅಂತಿಮವಾಗಿರುತ್ತದೆ.
32. ಕರಾರಿನಿಂದ ಉದ್ಭವಿಸಬಹುದಾದಂತಹ ಯಾವುದೇ ವ್ಯಾಜ್ಯ ಅಥವಾ ವಿವಾದ ಕ್ಷೇಮುಗಳನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಉಭಯ ಪಕ್ಷದವರು ಅಂತಹ ವಿವಾದವನ್ನು ಕರ್ನಾಟಕ Arbitration ಕೇಂದ್ರ (ದೇಶಿಯ, ಅಂತರ್‌ದೇಶಿಯ)ನಿಯಮಗಳು, 2012ರಡಿಯಲ್ಲಿ ನೇಮಕಗೊಂಡ ಒಬ್ಬರು ಅಥವಾ ಹಲವು ಪಂಚಾಯತ್‌ದಾರರ ಮೂಲಕ ಪರಿಹರಿಸಲು ಒಪ್ಪಿಕೊಳ್ಳಲಾಗಿದೆ.
33. ಯಾವುದೇ ಕಾರಣ ನೀಡದೇ ಟೆಂಡರನ್ನು ಪುರಸ್ಕರಿಸುವ / ತಿರಸ್ಕರಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.
34. ನಿಗಮದಿಂದ ಕರೆಯಲಾಗುವ ಯಾವುದೇ ಟೆಂಡರ್ / ಸಂಧಾನವನ್ನು ಯಾವುದೇ ಸಮಯದಲ್ಲಿ ರದ್ದುಪಡಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.
35. ಸಂಧಾನ / ಇ–ಟೆಂಡರ್ ಪ್ರಕಟಣೆಯನ್ನು ಯಾವುದೇ ಕಾರಣ ನೀಡದೆ ಮುಂದೂಡುವ & ತಿರಸ್ಕರಿಸುವ ಹಕ್ಕನ್ನು ನಿಗಮವು ಕಾಯ್ದಿರಿಸಿಕೊಂಡಿದೆ.
36. ಇ.ಎಸ್.ಐ ಕಾಯ್ದೆಯ ವ್ಯಾಪ್ತಿಯಲ್ಲಿ ಬರುವ ವಾಣಿಜ್ಯ ಮಳಿಗೆಗಳ / ಸ್ಥಳಗಳ ಪರವಾನಗಿದಾರರುಗಳು ಇ.ಎಸ್.ಐ ಕೋಡ್‌ನ್ನು ಹೊಂದಿರಬೇಕು ಮತ್ತು ಅವರುಗಳ ವ್ಯಾಪ್ತಿಯಲ್ಲಿ ಬರುವ ನೌಕರರನ್ನು ಇ.ಎಸ್.ಐ ವ್ಯಾಪ್ತಿಯಲ್ಲಿ ತರಬೇಕು ಮತ್ತು ಇ.ಎಸ್.ಐ ಕಾರ್ಡ್‌ನ್ನು ಕೊಡಿಸಬೇಕು.
37. ಇ.ಎಸ್.ಐ ಕಾಯ್ದೆಯ ವ್ಯಾಪ್ತಿಯಲ್ಲಿ ಬರುವ ವಾಣಿಜ್ಯ ಮಳಿಗೆಗಳ / ಸ್ಥಳಗಳ ಪರವಾನಗಿದಾರರುಗಳು ನಿಗದಿತ ವಂತಿಕೆಯನ್ನು ಆನ್‌ಲೈನ್‌ನಲ್ಲಿ ಸಲ್ಲಿಸಬೇಕು ಮತ್ತು ಇ.ಎಸ್.ಐ ಸೌಲಭ್ಯಗಳನ್ನು ನೌಕರರಿಗೆ ಮತ್ತು ಅವರ ಅವಲಂಬಿತರಿಗೆ ಸಿಗುವಂತೆ ಸಹಾಯ ಮಾಡಬೇಕು.
38. ಭಾರತ ಸರ್ಕಾರದಿಂದ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸಲಾಗಿದೆ. ಪ್ಲಾಸ್ಟಿಕ್‌ಲಿಂದ ತಯಾರಾಗುವಂತಹ ವಸ್ತುಗಳನ್ನು / ಉಪಕರಣಗಳನ್ನು ಬಳಸುವುದು / ಪ್ರದರ್ಶಿಸುವುದನ್ನು ನಿಷೇಧಿಸಲಾಗಿದೆ. ಒಂದು ವೇಳೆ ಪ್ಲಾಸ್ಟಿಕ್ ಬಳಕೆ ಮಾಡಿರುವುದು ಕಂಡು ಬಂದಲ್ಲಿ ಸದರಿಯವರ ಪರವಾನಗಿಯನ್ನು ರದ್ದುಪಡಿಸಲು ಕ್ರಮ ಕೈಗೊಳ್ಳಲಾಗುವುದು.

**ವಿಶೇಷ ಸೂಚನೆ : –**

1. ಮಳಿಗೆಗೆ ನಿಗದಿಪಡಿಸಿದ ಇ.ಎಂ.ಡಿ ಮೊತ್ತದ ಡಿ.ಡಿ ಹಾಗೂ ಅರ್ಜಿ ಶುಲ್ಕದ ಮೊತ್ತವನ್ನು ಡಿ.ಡಿ.ಮೂಲಕ ಪಡೆದು ಸಂಧಾನ ನಡೆಯುವ ಕೊನೆಯ ದಿನಾಂಕ : 02.06.2022 ರಂದು ಸಮಯ ಮದ್ಯಾಹ್ನ 15.00 ಗಂಟೆಗೆ ವಿಭಾಗೀಯ ಕಛೇರಿ, ದಾವಣಗೆರೆ ವಿಭಾಗ ದಾವಣಗೆರೆ ಇಲ್ಲಿ ಮೂಲ ದಾಖಲಾತಿಗಳೊಂದಿಗೆ ಹಾಜರಿರುವುದು.
2. ಸಂಧಾನ ಪ್ರಕಟಣೆಯಲ್ಲಿರುವ ಮಳಿಗೆಗೆ ಸಂಬಂಧಿಸಿದ ವಿವರಗಳನ್ನು ಸಂಪೂರ್ಣವಾಗಿ ಓದಿ ಅರ್ಥೈಸಿಕೊಂಡಿರುವ ಬಗ್ಗೆ ಹಾಗೂ ಎಲ್ಲಾ ಷರತ್ತು ಮತ್ತು ನಿಬಂಧನೆಗಳನ್ನು ಒಪ್ಪಿರುವ ಬಗ್ಗೆ ಸ್ವಯಂ ದೃಢೀಕರಣ ನಮೂನೆಯಲ್ಲಿ ಭರ್ತಿ ಮಾಡಿ ಪೂರ್ಣ ಹೆಸರು, ವಿಳಾಸದೊಂದಿಗೆ ಸಹಿ ಮಾಡಿ ಸಲ್ಲಿಸುವುದು.
3. ಪಾನ್ ಕಾರ್ಡ್ ಸಲ್ಲಿಸುವುದು ಕಡ್ಡಾಯವಾಗಿದ್ದು ಹಾಗೂ ವಿಳಾಸ ದೃಢೀಕರಣ ಪತ್ರಕ್ಕೆ ವೋಟರ್ ಐಡಿ, ಆಧಾರ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಪಾಸಪೋರ್ಟ & ಇತರೆ ದಾಖಲಾತಿಗಳನ್ನು ತರುವುದು.
4. ಎಲ್ಲಾ ಬಿಡ್‌ದಾರರು ಕಪ್ಪುಪಟ್ಟಿಗೆ ಸೇರಿಲ್ಲದಿರುವ ಬಗ್ಗೆ ಸ್ವಯಂ ದೃಢೀಕರಣ ಪತ್ರದ ನಮೂನೆಯಲ್ಲಿ ಭರ್ತಿ ಮಾಡಿ ಪೂರ್ಣ ಹೆಸರು, ವಿಳಾಸದೊಂದಿಗೆ ಸಹಿ ಮಾಡಿ ಸಲ್ಲಿಸುವುದು.

ವಿಭಾಗೀಯ ನಿಯಂತ್ರಣಾಧಿಕಾರಿ
ಕ.ರಾ.ರ.ಸಾ.ನಿಗಮ::ದಾವಣಗೆರೆ ವಿಭಾಗ

ಯಿಂದ
ಶ್ರೀ ---------------

----------------

----------------

----------------

ಗೆ,
ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ರಾ.ರ.ಸಾ.ನಿಗಮ,
ದಾವಣಗೆರೆ ವಿಭಾಗ,
ದಾವಣಗೆರೆ

ಮಾನ್ಯರೆ,

ವಿಷಯ : **ಪ್ರಸ್ತುತ ಸಂಧಾನದಲ್ಲಿನ ಷರತ್ತು ಮತ್ತು ನಿಬಂಧನೆಗಳನ್ನು ಒಪ್ಪಿರುವ** ಬಗ್ಗೆ ಸ್ವಯಂ ದೃಢೀಕರಣ ಪತ್ರ.
ಉಲ್ಲೇಖ : **ಸಂಧಾನ** ಪ್ರಕಟಣೆ ಸಂ:02/2022-23 ದಿ: /05/2022

XXXXXXX

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಾನು **ಸಂಧಾನ** ಪ್ರಕಟಣೆ ಸಂಖ್ಯೆ : ---------- ದಿ : -------------- ರಂತೆ ___________ ಬಸ್ ನಿಲ್ದಾಣದ ___________________ಮಳಿಗೆಯ ಬಗ್ಗೆ (ಮಾತುಕತೆಯ) ಸಂಧಾನದ ಮೂಲಕ ಅರ್ಜಿ ಸಲ್ಲಿಸಿದ್ದು, ಸದರಿ ಸಂಧಾನದಲ್ಲಿ ಎಲ್ಲಾ ಷರತ್ತು ಮತ್ತು ನಿಬಂಧನೆಗಳನ್ನು ಓದಿಕೊಂಡು ಒಪ್ಪಿರುವ ಬಗ್ಗೆ ಈ ಮೂಲಕ ಸ್ವಯಂ ದೃಢೀಕರಿಸುತ್ತೇನೆ.

ಸದರಿ ಸಂಧಾನದಲ್ಲಿ ಎಲ್ಲಾ ಷರತ್ತು ಮತ್ತು ನಿಬಂಧನೆಗಳ ಬಗ್ಗೆ ನಿಗಮವು ತೆಗೆದುಕೊಳ್ಳುವ ನಿರ್ಧಾರ/ಕ್ರಮಗಳಿಗೆ ಬದ್ಧನಾಗಿರುತ್ತೇನೆಂದು ಈ ಮೂಲಕ ದೃಢೀಕರಿಸುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

( )

ದಿ :

ರಿಂದ,
ಶ್ರೀ ---------------
----------------
----------------
----------------

ಗೆ,
ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ರಾ.ರ.ಸಾ.ನಿಗಮ,
ದಾವಣಗೆರೆ ವಿಭಾಗ,
ದಾವಣಗೆರೆ.

ಮಾನ್ಯರೆ,

ವಿಷಯ : **ಕಪ್ಪು ಪಟ್ಟಿ (Black List) ಗೆ** ಸೇರಿಲ್ಲದಿರುವ ಬಗ್ಗೆ ಸ್ವಯಂ ದೃಢೀಕರಣ ಪತ್ರ.
ಉಲ್ಲೇಖ : **ಸಂಧಾನ** ಪ್ರಕಟಣೆ ಸಂ:02/2022-23 ದಿ: /05/2022

ಘಿಘಿಘಿಘಿಘಿಘಿಘಿ

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಾನು ಸಂಧಾನ ಪ್ರಕಟಣೆ ಸಂಖ್ಯೆ : ---------- ದಿ : -------------- ರಂತೆ ___________ ಬಸ್ ನಿಲ್ದಾಣದ __________________ಮಳಿಗೆಯ ಬಗ್ಗೆ (ಮಾತುಕತೆಯ) ಸಂಧಾನದ ಮೂಲಕ ಅರ್ಜಿ ಸಲ್ಲಿಸಿದ್ದು, ನಾನು ಕ.ರಾ.ರ.ಸಾ.ನಿಗಮ / ಬೆಂ.ಮ.ಸಾ.ಸಂಸ್ಥೆ / ವಾ.ಕ.ರ.ಸಾ.ಸಂಸ್ಥೆ / ಈ.ಕ.ರ.ಸಾ.ಸಂಸ್ಥೆ ಮತ್ತು ಇತರೆ ಸರ್ಕಾರಿ ಇಲಾಖೆಗಳಲ್ಲಿ ಯಾವುದೇ ವಾಣಿಜ್ಯ ಮಳಿಗೆಗಳ / ಜಾಹೀರಾತು ವಿಷಯಕ್ಕೆ ಸಂಬಂಧಿಸಿದಂತೆ **ಕಪ್ಪು ಪಟ್ಟಿ (Black List) ಗೆ** ಸೇರಿಲ್ಲವೆಂದು ಈ ಮೂಲಕ ಸ್ವಯಂ ದೃಢೀಕರಿಸುತ್ತೇನೆ.

ನಾನು ಒದಗಿಸಿರುವ ಮಾಹಿತಿಯು ಸತ್ಯವೆಂದು ದೃಢೀಕರಿಸುತ್ತ, ಈ ಬಗ್ಗೆ ಯಾವುದೇ ಮಾಹಿತಿ ತಪ್ಪು ಎಂದು ಯಾವುದೇ ಹಂತದಲ್ಲಿ ಕಂಡುಬಂದಲ್ಲಿ ನಾನು ಸಲ್ಲಿಸಿರುವ ಇ.ಎಂ.ಡಿ / ಭದ್ರತಾ ಠೇವಣಿಯ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ನನ್ನ ಆಯ್ಕೆ / ಕರಾರನ್ನು ರದ್ದುಗೊಳಿಸುವ ನಿಯಮದ ಬಗ್ಗೆ ತಿಳಿದು ಅರ್ಜಿ ಸಲ್ಲಿಸಿದ್ದು, ಈ ಬಗ್ಗೆ ನಾನು ಯಾವುದೇ ತಪ್ಪು ಮಾಹಿತಿ ನೀಡಿರುವುದು ಕಂಡುಬಂದಲ್ಲಿ / ಅಸತ್ಯವೆಂದು ದೃಡಪಟ್ಟಲ್ಲಿ ನಿಗಮವು ತೆಗೆದುಕೊಳ್ಳುವ ನಿರ್ಧಾರ / ಕ್ರಮಗಳಿಗೆ ಬದ್ಧನಾಗಿರುತ್ತೇನೆಂದು ಈ ಮೂಲಕ ದೃಢೀಕರಿಸುತ್ತೇನೆ..

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

( )

ದಿ :

**ಇಂದ,**
**ಶ್ರೀ ---------------------**
**---------------------**
**---------------------**
**---------------------**

**ಗೆ,**
**ವಿಭಾಗೀಯ ನಿಯಂತ್ರಣಾಧಿಕಾರಿ,**
**ಕ.ರಾ.ರ.ಸಾ.ನಿಗಮ,**
**ದಾವಣಗೆರೆ ವಿಭಾಗ,**
**ದಾವಣಗೆರೆ.**

**ಮಾನ್ಯರೆ,**

**ಚಕ್‌ಲಿಸ್ಟ್**

| | |
|---|---|
| ಬಸ್ ನಿಲ್ದಾಣ | |
| ಅರ್ಜಿ ಸಲ್ಲಿಸಿದ ಮಳಿಗೆ ಹೆಸರು & ಸಂಖ್ಯೆ | |
| ಬಿಡ್‌ದಾರರ ಹೆಸರು | |
| ಈ ಕೆಳಕಂಡ ದಾಖಲಾತಿಗಳನ್ನು ಸಲ್ಲಿಸಿರುವ ಬಗ್ಗೆ ಗುರುತು ಮಾಡುವುದು (ಸಲ್ಲಿಸಿರುತ್ತೇನೆ/ಸಲ್ಲಿಸಿರುವುದಿಲ್ಲ ಎಂಬ ಬಗ್ಗೆ ಸ್ಪಷ್ಟವಾಗಿ ನಮೂದಿಸುವುದು) | |
| ಇ.ಎಂ.ಡಿ. ಡಿ.ಡಿ (ನಂಬರ್‌ನೊಂದಿಗೆ) | |
| ಅರ್ಜಿ ಶುಲ್ಕದ ಡಿ.ಡಿ (ನಂಬರ್‌ನೊಂದಿಗೆ) | |
| ಪಾನ್ ಕಾರ್ಡ್ | |
| ವಿಳಾಸ ದೃಢೀಕರಣ ಪತ್ರ | |
| ಕಪ್ಪು ಪಟ್ಟಿಗೆ ಸೇರಿಲ್ಲದ ಬಗ್ಗೆ ಸ್ವಯಂ ದೃಢೀಕರಣ ಪತ್ರ | |
| ಪ್ರಸ್ತುತ ಸಂಧಾನದ ಷರತ್ತು ಮತ್ತು ನಿಬಂಧನೆಗಳನ್ನು ಒಪ್ಪಿರುವ ಬಗ್ಗೆ ಸ್ವಯಂ ದೃಢೀಕರಣ ಪತ್ರ | |

ತಮ್ಮ ವಿಶ್ವಾಸಿ,

(                    )

ಅರ್ಜಿದಾರರ ಸಹಿ

ದಿ :